ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ

ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ



ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು

ನಮ್ಮ ವಿಳಾಸ :
The Christadelphians
PO Box **4237**
Bangalore 560042

ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 19



* ನಿಲ್ಲು ಮತ್ತು ದೃಷ್ಟಿಸು
* ಯೆರೂಸಲೇಮ್– ಮುಂದಿನ ಜಗತ್ತಿನ ರಾಜಧಾನಿ
* ಸತ್ಯವೇದ ಮತ್ತು ಆಧುನಿಕ ಔಷದ
* ಮರಣ
* ದೇವರ ಮನೆಯ ನಿರ್ಮಾಣ

ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಆಧಾರವಾಗಿ ಜೀವನವನ್ನು ನಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

Co-ordinator : Linus Daniel

e-mail :
info@choose2live.info
http://www.choose2live.info/noothana_shristi

Contact:
The Christadelphians,
P.O.Box No 535,
Bangalore 560 005,
India.

ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ಭಾಷಾಂತರಕಾರರು } **ರೀಟಾ ಸತ್ಯರಾಜ್**, **ಕಿರಣ್**

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]

ನಿಲ್ಲು ಮತ್ತು ದೃಷ್ಟಿಸು

ವಿಸ್ಮಯಕಾರಿ ಎನ್ನಿಸುವಷ್ಟು ಸುಂದರವಾದ, ಅದ್ಭುತ ಪ್ರಪಂಚದಲ್ಲಿ ನಾವು ವಾಸಿಸುತ್ತಿದ್ದೇವೆ. ಆದರೆ ನಾವು ಯಾವಾಗಲೂ ಅದನ್ನು ನೋಡುತ್ತಾ ಕುಳಿತುಕೊಳ್ಳುವುದಿಲ್ಲ, ನಮ್ಮ ಸುತ್ತಲೂ ಇನ್ನೆಷ್ಟೋ ಸಂಗತಿಗಳು ಘಟಿಸುತ್ತಿರುತ್ತವೆ. ಆಧುನಿಕ ಜೀವನದ ಅವಸರದ ದೆಸೆಯಿಂದ ಅದಕ್ಕೆಲ್ಲಾ ಕುರುಡರಾಗಿರುತ್ತೇವೆ. ಆಗಿಂದಾಗ್ಗೆ ಸ್ವಲ್ಪ ಬಿಡುವು ತೆಗೆದುಕೊಂಡು ನಮ್ಮ ಸುತ್ತಲೂ ಕಣ್ಣುಹಾಯಿಸಿ, ದೇವರ ಕೈಚಳಕವನೂ, ಶಕ್ತಿಯನ್ನು ಶ್ಲಾಘಿಸಲು ಕಲಿತರೆ ಎಷ್ಟು ಚೆನ್ನಾಗಿರುತ್ತದೆ! ಡಬ್ಲ್ಯೂ.ಎಚ್.ಡೇವೀಸ್ ಎಂಬ ಕವಿಯು ತನ್ನ ಖ್ಯಾತವಾದ "ಬಿಡುವು" ಎಂಬ ಕವಿತೆಯಲ್ಲಿ ಹೀಗೆ ಹಾಡಿದ್ದಾನೆ – "ಚಿಂತೆಗಳಿಂದ ತುಂಬಿದ ಜೀವನದಿಂದ ಏನು ಪ್ರಯೋಜನ, ನಿಂತು ದೃಷ್ಟಿಸಲು ಸಮಯವಿಲ್ಲದಿದ್ದರೆ? ರೆಂಬೆಗಳ ಕೆಳಗೆ ನಿಲ್ಲಲಾಗಲೀ, ಕುರಿದನಗಳಂತೆ ಕೆಲಹೊತ್ತು ದೃಷ್ಟಿಸಲಾಗಲೀ ವ್ಯವಧಾನವಿಲ್ಲ, ಕಾಡು ಹಾದಿಯಲ್ಲಿ ಸಾಗುವಾಗಲೂ ಸುತ್ತಲೂ ನೋಡಲಾಗಲೀ, ಅಳಿಲುಗಳು ಹುಲ್ಲಿನಲ್ಲಿ ಬೀಜಗಳನ್ನು ಅವಿತಿಡುವುದನ್ನು ಕಾಣಲಾಗಲೀ ಸಮಯವಿಲ್ಲ".

ನಾವು ಸರ್ವಸಾಧಾರಣವೆಂದು ಭಾವಿಸುವ ಕೆಲವಸ್ತುಗಳ ಬಗ್ಗೆ ಕವಿಯು ಹೇಳುತ್ತಿದ್ದಾನೆ ಉದಾಹರಣೆಗೆ ಹೂಗಳು, ಈ ಸುಂದರ ಹೂಗಳನ್ನು ದೃಷ್ಟಿಸಿದಾಗಲೇ ಅವುಗಳ ಸಂಕೀರ್ಣ ರಚನೆ ಅರಿವಾಗುತ್ತದೆ. ಅಥವಾ ಪಕ್ಷಿಗಳು– ಅವುಗಳ ಕೆಲವು ಸಾಧನೆಗಳು ನಮ್ಮನ್ನು ಚಕಿತಗೊಳಿಸುತ್ತವೆ. ಶೀತಪ್ರದೇಶಗಳ ಕೆಲಹಕ್ಕಿಗಳು ಪ್ರತಿವರ್ಷ ಚಳಿಗಾಲದಲ್ಲಿ ಆಫ್ರಿಕಾ ಖಂಡಕ್ಕೆ ವಲಸೆ ಹೋಗುತ್ತವೆ, ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಮತ್ತೆ ವಸಂತ ಕಾಲದಲ್ಲಿ ಹಾರುತ್ತಾ ತಮ್ಮ ಹಳೆಯ ವಾಸಸ್ಥಾನಕ್ಕೆ ಹಿಂದಿರುಗಿ ಬರುತ್ತವೆ. ಇವಕ್ಕೆ ಉಪಗ್ರಹ ಸಂಚಾಲನೆಯಂತಹ ಆಧುನಿಕ ಸಹಾಯಕ ಸಾಧನಗಳಿಲ್ಲ. ಆದರೆ ಅದಕ್ಕಿಂತ ಉತ್ತಮವಾದ, ಹಾರಬೇಕೆಂದಿರುವ ದಿಕ್ಕನ್ನು ಗುರುತಿಸಿ ಖಂಡದಿಂದ ಖಂಡಕ್ಕೆ ಹಾರಿ, ಸೇರಬೇಕಾದ ಸ್ಥಳವನ್ನು ಸರಿಯಾಗಿ ತಲುಪುವ ದೈವದತ್ತವಾದ ಜಾಣ್ಮೆಯು ಇವಕ್ಕಿವೆ.

ಎಲ್ಲರನ್ನೂ ಆವರಿಸಿರುವ ದೇವರ ಪಾಲನೆ :–

ಗುಬ್ಬಚ್ಚಿಗಳ ಎರಡು ಕುಟುಂಬಗಳು ನನ್ನ ತೋಟದಲ್ಲಿ ವಾಸವಾಗಿವೆ. ಈ ಹಕ್ಕಿಗಳು ತಮ್ಮ ಮರಿಗಳನ್ನು ಅದ್ಭುತವಾಗಿ ಪೋಷಿಸುತ್ತವೆ. ಮರಿಗಳಿಗೆ ಉಣಿಸಲು ಪೂರೈಸಲು ಎಡೆಬಿಡದೆ ಹಾರಾಟ ಇವುಗಳದ್ದು.



ಅಪ್ರಯೋಜಕವೆಂದು ಅನೇಕರು ಭಾವಿಸುವ ಹಕ್ಕಿಗಳು ಪ್ರಪಂಚದಾದ್ಯಂತ ಇದೇ ಕಾರ್ಯದಲ್ಲಿ ತೊಡಗಿರುತ್ತವೆ. "ಅವುಗಳಿಂದ ಏನು ಲಾಭ?" ಅಥವಾ "ಅವುಗಳ ಮೌಲ್ಯವೆಷ್ಟು?" ಎಂದು ಕೆಲವರು ಕೇಳಬಹುದು. ಕ್ರಿ.ಶ. ಒಂದನೇ ಶತಮಾನದಲ್ಲಿ ಇಸ್ರಾಯೇಲ್ ದೇಶದಲ್ಲಿ ಈ ಪುಟ್ಟ ಹಕ್ಕಿಗಳ ವ್ಯಾಪಾರ ನಡೆಯುತ್ತಿತ್ತು. ಇವುಗಳನ್ನು ರುಚಿಕರ ಖಾದ್ಯವೆಂದು ಪರಿಗಣಿಸಲಾಗುತ್ತಿತ್ತು. ಸತ್ಯವೇದದಲ್ಲಿ ಅನೇಕ ಕಡೆ ಗುಬ್ಬಿಗಳನ್ನು ಬಲೆಬೀಸಿ ಹಿಡಿದು ಮಾರಾಟ ಮಾಡುತ್ತಿದ್ದುದರ ಉಲ್ಲೇಖವನ್ನು ಕಾಣಬಹುದು. ಯೇಸುಕ್ರಿಸ್ತನು ಒಂದು ಕಡೆ ಹೀಗೆ ತಿಳಿಸಿದ್ದಾನೆ– "ದುಡ್ಡಿಗೆ ಎರಡು ಗುಬ್ಬಿಗಳನ್ನು ಮಾರುದುಟಲ್ಲಾ?" (ಮತ್ತಾಯ 10 29), ಮತ್ತೊಂದು ಕಡೆ ಹೀಗೆ ತಿಳಿಸಿದೆ – "ಎರಡು ದುಡ್ಡಿಗೆ ಐದು ಗುಬ್ಬಿಗಳನ್ನು ಮಾರುತ್ತಾರಲ್ಲಾ?" (ಲೂಕ 12:6). ಹೆಚ್ಚು ಸಂಖ್ಯೆಯ ಹಕ್ಕಿಗಳನ್ನು ಕೊಂಡಾಗ ಒಂದು ಹಕ್ಕಿ ಉಚಿತವಾಗಿ ಸಿಗುತ್ತಿದ್ದಂತೆ ಕಾಣುತ್ತದೆ. "ನಾಲ್ಕನ್ನು ಕೊಂಡರೆ ಒಂದು ಉಚಿತ" ಎಂದು ಈಗೆಲ್ಲಾ ಮಾರುವ ಹಾಗೆ, ಆ ಐದನೆಯ ಹಕ್ಕಿಗೆ ಮಾರಾಟಗಾರನ

ಕಣ್ಣಲ್ಲಿ ಯಾವ ಬೆಲೆಯೂ ಇರಲಿಲ್ಲ. ಆದರೆ ಯೇಸುಕ್ರಿಸ್ತನು ಹೇಳುವ ಹಾಗೆ ದೇವರು ಆ ಪುಟ್ಟ ಹಕ್ಕಿಗೂ ಪಾಲಕನಾಗಿದ್ದಾನೆ. "ಎರಡು ದುಡ್ಡಿಗೆ ಐದು ಗುಬ್ಬಿಗಳನ್ನು ಮಾರುತ್ತಾರಲ್ಲಾ? ಆದಾಗ್ಯೂ ಅವುಗಳಲ್ಲಿ ಒಂದಾದರೂ ದೇವರಿಗೆ ಮರೆತುಹೋಗುವುದಿಲ್ಲ. ನಿಮ್ಮ ತಲೆಗೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ, ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು" (ಲೂಕ 12:6–7). ಈ ಮಾತುಗಳು ಎಷ್ಟು ಉತ್ತೇಜನಕಾರಿಯಾಗಿವೆ! ಆ ಒಂದು ಗುಬ್ಬಿಯು ದೇವರಿಗೆ ಅಷ್ಟು ಮುಖ್ಯವಾದರೆ, ನಮ್ಮಲ್ಲಿ ಒಬ್ಬೊಬ್ಬರೂ ದೇವರಿಗೆ ಇನ್ನೂ ಹೆಚ್ಚಿನವರು ಎಂದು ನಾವು ನಂಬಿಕೆ ಹೊಂದಬಹುದು.

ದೇವರೂ, ಅವನ ಜಗತ್ತು :–

ನಮ್ಮ ಸುತ್ತಲೂ ಹಾರಾಡುವ ಪಕ್ಷಿಗಳು ದೇವರು ಜಗತ್ತನ್ನು ಸೃಷ್ಟಿಸುವ ಮೂಲ ಉದ್ದೇಶವನ್ನು ನಮಗೆ ನೆನಪು ಮಾಡುವ ಪುಟ್ಟ ಜೀವಿಗಳಲ್ಲಿ ಒಂದು ವರ್ಗ ಮಾತ್ರ, ದೇವರು ಎಲ್ಲಾ ಸಸ್ಯ ಮತ್ತು ಪ್ರಾಣಿ ವರ್ಗದೊಂದಿಗೆ ಜಗತ್ತನ್ನು ಸೃಷ್ಟಿಸಿ ಕೊನೆಯಲ್ಲಿ ಅದರ ಉಸ್ತುವಾರಿಗೆ ಮನುಷ್ಯನನ್ನು ಉಂಟುಮಾಡಿ ಅದರಲ್ಲಿಟ್ಟನು. ದೇವರು ಎಲ್ಲವನ್ನೂ ಆಸ್ಥೆಯಿಂದ ಯೋಚಿಸಿ, ಭೂಮಿಯ ಪರಿಸರ ಸಂತುಲಿತವೂ, ಸ್ಥಿರವೂ ಆಗಿರುವಂತೆ ಮಾಡಿದನು. ಎಲ್ಲವೂ ಸುಂದರವಾಗಿ ಸೃಷ್ಟಿಯಾಯಿತು. ಏಕಂದರೆ ದೇವರು ಒಳ್ಳೆಯ ಮತ್ತು ಸುಂದರವಾಗಿರುವ ಎಲ್ಲವುಗಳ ಕರ್ತೃವಾಗಿದ್ದಾನೆ. ಆರಂಭದಲ್ಲೇ ದೇವರು ಸೃಷ್ಟಿಯ ಮೌಲ್ಯಮಾಪನ ಮಾಡಿದಾಗ ಅದರ ಶ್ರೇಷ್ಟತೆಯು ಹೀಗೆ ವ್ಯಕ್ತವಾಗಿದೆ –

"ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ, ಅದು ಬಹು ಒಳ್ಳೇದಾಗಿತ್ತು, ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ ದಿನವಾಯಿತು. ಹೀಗೆ ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು" (ಆದಿಕಾಂಡ 1:31–2:1).

ಪುರುಷನೂ ಸ್ತ್ರೀಯೂ ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟರು ಎಂದಿದೆ, ಅವರು ಸೃಷ್ಟಿ ಮಾಡಲ್ಪಟ್ಟವರಾಗಿದ್ದರು ಮತ್ತು ಆ ಸೃಷ್ಟಿಯು "ಬಹಳ ಒಳ್ಳೇದಾಗಿತ್ತು". ಮಾನವ ಕುಲವು ಇತರ ಸೃಷ್ಟಿಯೊಂದಿಗೆ ಒಂದಾಗಿ, ಎಲ್ಲಾ ಜೀವಿಗಳೂ ಸಾಮರಸ್ಯದಿಂದ ತಮ್ಮ ಸೃಷ್ಟಿಕರ್ತನ ಜೊತೆ ಬಾಳುವುದೆಂದಿತ್ತು.

ಸುಂದರ ಕಣಿವೆ ಪ್ರದೇಶದ ಸ್ವಚ್ಛ ಸರೋವರಕ್ಕೆ ನೀವು ಹೋಗುವುದಾದರೆ ಅಲ್ಲಿನ ಪರಿಸರ ನಿಮಗೆ ನಿಜವಾದ ಸಂತೋಷವನ್ನು ಕೊಡುತ್ತದೆ. ಆ ಅನುಭವ ಮನುಷ್ಯನು ಹಿಂದೆ ದೇವರೊಟ್ಟಿಗೆ ಸೃಷ್ಟಿಯ ಅದ್ಭುತವನ್ನು ಸವಿಯುತ್ತಾ, ದೇವರಿಗೆ ಸ್ತೋತ್ರವನ್ನು, ಕೃತಜ್ಞತೆಯನ್ನೂ ಸಲ್ಲಿಸುತ್ತಾ ಜೀವಿಸುತ್ತಿದ್ದ ಆನಂದದ ಒಳನೋಟವನ್ನು ನೀಡುತ್ತದೆ.

ಆದಾಮನು ಪಾಪ ಮಾಡಿ ಮರಣವನ್ನು ಭೂಮಿಯ ಮೇಲೆ ಬರಮಾಡುವ ಮೊದಲು, ಈ ಸಾಮಾನ್ಯ ಮತ್ತು ಒಗ್ಗಟ್ಟಿನ ಭಾವನೆಯು ದಟ್ಟವಾಗಿದ್ದು ಪ್ರಾಣಿ ಜಗತ್ತಿನಲ್ಲಿಯೂ ಯಾವುದೇ ಅಪಸ್ವರವಿಲ್ಲದೆ ಪರಿಸರವು ಪೂರ್ಣವಾಗಿ ಸಂತುಲಿತವಾಗಿತ್ತು. ವಿಚಿತ್ರವೆಂದರೆ ಇಂದಿನ ದಿನಗಳಲ್ಲಿ ಅನೇಕರು ಉತ್ತಮವೂ, ಹೆಚ್ಚು ಸಂತುಲಿತ ಮತ್ತು ಸ್ಥಾಯಿಯಾದ ಪ್ರಪಂಚದಲ್ಲಿ ವಾಸಿಸಲು ಹಾತೊರೆಯುತ್ತಾರೆ. ಆದರೆ ಅವರು ಅರ್ಥಮಾಡಿಕೊಳ್ಳದ ವಿಷಯವೆಂದರೆ

ದೇವರಿಗೂ ಇದೇ ಬೇಕು ಎಂಬುದು. ದೇವರಿಂದ ಮಾತ್ರ ಪ್ರಪಂಚವನ್ನು ಸರಿಪಡಿಸಿ ಪೂರ್ಣತೆಗೆ ಒಯ್ಯಲು ಸಾಧ್ಯ. ಇದು ಸಾಧ್ಯವಾಗಬೇಕಾದರೆ ಮನುಷ್ಯನು ಮೊದಲು ತನ್ನನ್ನು ಸರಿಪಡಿಸಿಕೊಂಡು ದೇವರೊಂದಿಗಿನ ಸಂಬಂಧವನ್ನು ಸುಧಾರಿಸಿಕೊಳ್ಳಬೇಕು. ಅದಕ್ಕೆ ಮೊದಲು, ಈ ಅದ್ಭುತ, ಸುಂದರ ಪ್ರಪಂಚವು ದೇವರ ಸೃಷ್ಟಿ ಎನ್ನುವುದನ್ನು ಗುರುತಿಸಬೇಕು.

ಅದ್ಭುತ ವಿನ್ಯಾಸಕಾರ :–

ನಾವು ನಮ್ಮ ಸುತ್ತಲಿನ ಪ್ರಪಂಚವನ್ನು ಗಮನಿಸುವ ಅಭ್ಯಾಸವಿರಿಸಿಕೊಂಡರೆ, ದೇವರ ಸೃಷ್ಟಿಯೆಲ್ಲವೂ ಅವನ ಅಸ್ಥಿತ್ವಕ್ಕೆ ಮತು ಉದ್ದೇಶಕ್ಕೆ ಸಾಕ್ಷಿ ಎನ್ನುವುದು ತಿಳಿಯುತ್ತದೆ. ಭೂಮಿ ಮತ್ತು ಅದರಲ್ಲಿರುವುದೆಲ್ಲವೂ ಆಕಸ್ಮಿಕವಾಗಿ ಅಸ್ಥಿತ್ವಕ್ಕೆ ಬಂದಂಥವುಗಳಲ್ಲ, ಅಲ್ಲದೆ ಇಂತಹ ಆಕಸ್ಮಿಕಗಳೂ ಪದೇಪದೇ ಘಟಿಸುವಂಥವಲ್ಲ, ಸೃಷ್ಟಿಯೆಲ್ಲವೂ ಅದ್ಭುತಕರವಾಗಿ ವಿನ್ಯಾಸಗೊಂಡಿದೆ, ಮತ್ತು ಎಲ್ಲದರಲ್ಲೂ ಒಂದು ನಿರ್ಧಿಷ್ಟ ಉದ್ದೇಶವಿರುವುದು ಎದ್ದು ಕಾಣುತ್ತದೆ. ಸೃಷ್ಟಿಯನ್ನು ನೋಡುವಾಗೆಲ್ಲಾ ಅದರಲ್ಲಿನ ಅದ್ಭುತಗಳನ್ನು ಯೋಜಿಸಿ, ವಿನ್ಯಾಸಮಾಡಿ, ಕಾರ್ಯರೂಪಕ್ಕಿಳಿಸಿದಾತನ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸೆ ನಮ್ಮಲ್ಲಿ ಮೂಡಬೇಕು. ಹಳೆಯ ಕರಕುಶಲ ವಸ್ತುಗಳನ್ನು ನೋಡುತ್ತಲೇ ಪರೀಕ್ಷರು ಅವುಗಳ ಶಿಲ್ಪಿ ಯಾರೆಂದು ಹೇಳಿಬಿಡುವ ಹಾಗೆ, ನಾವೂ ದೇವರ ಕೈವಾಡವನ್ನು ಎಲ್ಲದರಲ್ಲೂ ಕಾಣಬೇಕು–

"ಹೇಗಂದರೆ ಕಣ್ಣಿಗೆ ಕಾಣದಿರುವ ದೇವರ ಗುಣಲಕ್ಷಣಗಳು, ಅಂದರೆ ಆತನ ನಿತ್ಯಶಕ್ತಿಯೂ, ದೈವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತದೆ; ಹೀಗಿರುವುದರಿಂದ ಮನುಷ್ಯರು ಉತ್ತರ ವಿಲ್ಲದವರಾಗಿದ್ದಾರೆ" (ರೋಮಾಪುರದವರಿಗೆ 1:20).

ಅಪೋಸ್ತಲನಾದ ಪೌಲನು ತಿಳಿಸಿರುವಂತೆ ನಮ್ಮ ಸುತ್ತಲೂ ಕಾಣುವ ಸಂಗತಿಗಳ ಮೂಲಕ, ದೇವರ ವ್ಯಕ್ತಿತ್ವದ ಅಗೋಚರ ಸ್ವರೂಪವನ್ನೂ, ಅವನ ಉದ್ದೇಶವನ್ನೂ **"ನೋಡ"**ಬಹುದು ಮತ್ತು **"ಅರ್ಥ"** ಮಾಡಿಕೊಳ್ಳಬಹುದು.

ಆದುದರಿಂದ ಪ್ರಕೃತಿಯು ನಮಗೆ ಸರ್ವವನ್ನೂ ಸೃಷ್ಟಿಸಿದ ಮಹಾಶಕ್ತಿಯಾದ ದೇವರ ಇರುವಿಕೆಯ ಬಗ್ಗೆ ಪಾಠ ಹೇಳಲು ಸಾಧ್ಯ. ಏಕಂದರೆ ಈ ಮಾತಿಗೆ ಸಾಕ್ಷಿಗಳು ನಮ್ಮ ಸುತ್ತಲೂ ಇವೆ. ಸದಾ ತಿರುಗುವ ಋತುಚಕ್ರ, ನಮ್ಮ ತೋಟದ ಹೂಗಳು, ನಿಸರ್ಗದ ರಮಣೀಯತೆ, ಹಕ್ಕಿಗಳ ಹಾಡು ಇವೆಲ್ಲಾ ದೇವರ ವಿನ್ಯಾಸಶೀಲತೆ, ನಿಯಮಬದ್ಧತೆ ಮತ್ತು ಸೌಂದರ್ಯ ಪ್ರಜ್ಞೆ ಇವುಗಳಿಗೆ ಸಾಕ್ಷಿಗಳು. ಇದರಿಂದ ದೇವರಿಲ್ಲ ಎಂದು ನೆಪ ಹೂಡುವುದು ಸಾಧ್ಯವಿಲ್ಲದ ಮಾತು. ನಾವು ದೇವರ ಬಗ್ಗೆ ಅರಿತುಕೊಳ್ಳಲು ಆರಂಭಿಸಬೇಕು.

ನಿಸರ್ಗವು ನಮ್ಮನ್ನು ಈ ದಿಶೆಯಲ್ಲಿ ಸ್ವಲ್ಪ ದೂರದವರೆಗೆ ಮುನ್ನೆಡೆಸುತ್ತದೆ, ಆದರೆ ದೇವರು ನಮ್ಮಿಂದ ಏನನ್ನು ನಿರಿಕ್ಷಿಸುತ್ತಾನೆ ಎಂದು ಅದು ನಮಗೆ ಹೇಳುವುದಿಲ್ಲ. ಈ ಕೆಲಸ **ಸತ್ಯವೇದ**ದಿಂದ(ಬೈಬಲ್) ಮಾತ್ರ ಸಾಧ್ಯ. ಸತ್ಯವೇದವು ಭೂಮಿಯನ್ನು ದೇವರು ಸೃಷ್ಟಿಸಿ, ಅದನ್ನು ನಮ್ಮೊಂದಿಗೆ ಹಂಚಿಕೊಳ್ಳಬಯಸುವುದು ಏಕೆಂದು ನಮಗೆ ತಿಳಿಸುತ್ತದೆ.

ನಾವುಗಳು ನಿಂತು, ಸುತ್ತಲಿನ ಸೃಷ್ಟಿಯನ್ನು ದೃಷ್ಟಿಸಿ, ಸಾಕ್ಷಿಗಳನ್ನು ಗಮನಿಸಿದ ಮೇಲೆ ಸತ್ಯವೇದವನ್ನು ಓದುವುದನ್ನು ಖಾತ್ರಿ ಮಾಡಿಕೊಳ್ಳಿ.

• • • • • • • • • • • • •

ಯೆರೂಸಲೇಮ್–ಮುಂದಿನ ಜಗತ್ತಿನ ರಾಜಧಾನಿ

ಅಸಂಭವನೀಯವಾಗಿ ಇದು ಕೆಲವರಿಗೆ ಗೋಚರವಾದಂತೆ, ಜಗತ್ತಿನ ಭವಿಷ್ಯವು ಯೆರೂಸಲೇಮಿನಲ್ಲೇ ನಿರ್ಧಾರವಾಗುತ್ತದೆ. ಯಾಕಂದರೆ, ಯೇಸುಕ್ರಿಸ್ತನು ರಾಜನಾಗಿ ಆಳುವುದು ಯೆರೂಸಲೇಮಿನಿಂದಲೇ.

ಕರ್ತನ ದೂತನಾದ ಗಬ್ರಿಯೇಲನು ಮರಿಯಳು ದೇವಕುಮಾರನಿಗೆ ಜನ್ಮ ನೀಡುವಳು ಎಂದು ಹೇಳುವಾಗ ಈ ರೀತಿಯಾಗಿ ಅವಳಿಗೆ ವಾಗ್ದಾನ ಮಾಡಿ ಹೇಳಲಾಯಿತು.

"ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ, ಆತನಿಗೆ ಯೇಸು ಎಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು" (ಲೂಕ 1:31–33).

ದಾವೀದನ ಸಿಂಹಾಸನವು ಯೆರೂಸಲೇಮಿನಲ್ಲಿತ್ತು – ಕ್ರಿ.ಪೂ. 1000 ವರ್ಷಗಳಷ್ಟು ಮುಂಚೆ ಆತನು ಇಸ್ರಾಯೇಲ್ಯರನ್ನು ಆಳಿದಂದಿನಿಂದ ಇದು ಇತ್ತು. ಈ ರೀತಿಯಾಗಿ ಹೊಸದಾಗಿ ಒಂದಾದ ಜನಾಂಗಳ ರಾಜಧಾನಿಯಾಗಿ ಮಾಡಲ್ಪಟ್ಟಿತ್ತು. ಆ ರಾಜ್ಯವು ನಷ್ಟವಾಗುವವರೆಗೂ ರಾಜರುಗಳು ಆ ಪಟ್ಟದಿಂದಲೇ 400 ವರ್ಷಗಳು ಆಳಿದರು. ಆದರೆ ದೇವರ ಪ್ರವಾದಿಗಳು ಎರಡು ಮುಖ್ಯ ವಿಷಯಗಳನ್ನು ಒತ್ತಿ ಹೇಳಿದ್ದಾರೆ:

*** ರಾಜ್ಯವು ಯೆರೂಸಲೇಮಿಗೆ ಹಿಂದಿರುಗುತ್ತದೆ.**

*** ನಂತರ ಈ ರಾಜ್ಯವು ಒಬ್ಬ ಅದ್ಭುತನಾಗಿರುವ ರಾಜನಿಂದ ಆಳಲ್ಪಡುತ್ತದೆ.**

ದೇವರ ರಾಜ್ಯ :–

ತನ್ನ ಪ್ರಾರಂಭದಿಂದಲೂ ಇಸ್ರಾಯೇಲ್ ಒಂದು ಸಾಧಾರಣವಾದ ರಾಜ್ಯವಲ್ಲ. ಇದರ ರಾಜರುಗಳು ದೇವರಿಂದಲೇ ನೇಮಿಸಲ್ಪಟ್ಟವರು, ಅವರು ದೇವರ ನಿಯಮಕ್ಕೆ ಅಧೀನರಾಗಿದ್ದು ಆತನ ಜನರನ್ನು ಆಳುವವರಾಗಿದ್ದರು. ಆ ರಾಜರು ಆತನ ಆಜ್ಞೆಗಳನ್ನು ಮುರಿದವರಾದಾಗ ಆತನು ಅವರನ್ನು ಅಧಿಕಾರದಿಂದ ಕಿತ್ತುಹಾಕಿದನು. ಅಂತಹ ರಾಜ್ಯವು ಇಂದಿಗೂ ಭೂಮಿಯ ಮೇಲೆ ಇಲ್ಲವೇ ಇಲ್ಲ. ಇದು ದೇವರ ರಾಜ್ಯ – ದೇವರು ತನ್ನ ಪ್ರಜೆಗಳನ್ನಾಗಿ ಆರಿಸಿಕೊಂಡ ಜನರಿಗಾಗಿದ್ದ ಭೂಮಿಯ ಮೇಲಿನ ಸರಕಾರವಾಗಿತ್ತು. ಆದರೆ ಪರ್ಯಾಯವಾಗಿ ರಾಜರುಗಳು ಗಲಭೆಯುಳ್ಳವರಾಗಿ ದೇವರ ಆಜ್ಞೆಗಳನ್ನು ಅಲಕ್ಷಿಸಿದ್ದರಿಂದ ಮತ್ತು ಅದರ ಜನರೂ ಸಹ ದೇವರ ವಾಕ್ಯಕ್ಕೆ ಅವಿಧೇಯರಾಗಿ ಅವುಗಳಿಗೆ ಪ್ರತಿಕ್ರಿಯಿಸದೇ ಇದ್ದದ್ದರಿಂದ, ಆ ರಾಜ್ಯಕ್ಕೆ ಅಂತ್ಯವಾಯಿತು. ದೇವರು ಆ ವ್ಯವಸ್ಥೆಯನ್ನು ನಿಲ್ಲಿಸಿದನು, ಆದರೆ ಅದರ ಸರಿಯಾದ ವಾರಸುದಾರನು ದಾವೀದನ ವಂಶದೊಳಗಿಂದ ಬಂದಾಗ ಆ ರಾಜ್ಯವು ತಿರುಗಿ ಬರುತ್ತದೆಂದು ದೇವರು ಸ್ಪಷ್ಟಪಡಿಸಿದ್ದಾನೆ(ಯೆಹೆಜ್ಕೇಲ 21:26–27 ವಾಕ್ಯಗಳನ್ನು ನೋಡಿ), ಈಗ ತಿರುಗಿ ಬರುವ ಆ ವಾರಸುದಾರನ ಬಗ್ಗೆ ಯಾವ ಸಂಶಯವೂ ಇಲ್ಲ.

ಕರ್ತನಾದ ಯೇಸು ತಾನು ದೇವರಿಗೆ ಸಂಪೂರ್ಣವಾಗಿ ವಿಧೇಯನಾಗಿದ್ದನು ಮತ್ತು ತಾನು ಸರ್ವಕ್ಕೂ ಯೋಗ್ಯನಾದ ರಾಜನೆಂಬುದನ್ನು ರುಜುಮಾಡಿದ್ದಾನೆ. ಆತನು ಯಾವಾಗಲೂ ತನ್ನ ತಂದೆಯಾದ ದೇವರ ಚಿತ್ತದಂತೆಯೇ ನಡೆದನು. ಆದ್ದರಿಂದ ದೇವರು ಆತನನ್ನು ಮರಣದಿಂದ ಎಬ್ಬಿಸಿದನು ಮತ್ತು ತನಗಾಗಿ ಭೂಮಿಯ ಮೇಲೆ ಆಳಲು ಆತನಿಗೆ ಸರ್ವಾಧಿಕಾರವನ್ನು ಕೊಟ್ಟಿದ್ದಾನೆ. ಮುಂದೆ ಆತನು ಯೆರೂಸಲೇಮನ್ನು ಇಡೀ ಜಗತ್ತಿನ ಕೇಂದ್ರವಾಗಿ ಮಾಡುತ್ತಾನೆ ಮತ್ತು ಅದು ದೇವರಿಗೆ ಸ್ತುತಿಹಾಡಿ ಮಹಿಮೆಪಡಿಸುತ್ತದೆ. ದೇವರು ಸದಾ ಇಷ್ಟಪಟ್ಟಿರುವ ರೀತಿಯಲ್ಲೇ ಕೊನೆಯಲ್ಲಿ ಈ ಜಗತ್ತು ಆತನ ಜನರು ವಾಸಿಸಲು ಯೋಗ್ಯವಾದ ಸ್ಥಳವಾಗಿ ಮಾರ್ಪಾಟು ಹೊಂದುತ್ತದೆ.

ಸಮಾಧಾನದಲ್ಲಿ ಯೆರೂಸಲೇಮ್ :–

ಯೆರೂಸಲೇಮಿನ ಮುಂದಿನ ಮಹಿಮಾತಿಶಯವಾದ ಸ್ಥಿತಿಯ ಬಗ್ಗೆ ಹೇಳಿರುವ ಪ್ರವಾದಿಗಳಿಂದ ಚಿತ್ರಿಸಲ್ಪಟ್ಟ ಎಲ್ಲಾ ವಿಷಯಗಳನ್ನು ಒಟ್ಟಾಗಿ ಜೋಡಿಸಿ ಅರ್ಥ ಮಾಡಿಕೊಳ್ಳುವಾಗ ಸಿಗುವ ಚಿತ್ರವೇ ಮುಂದಿನ ಜಗತ್ತಿನ ಭವಿಷ್ಯವಾಗಿರುತ್ತದೆ. ನೀವು ಅದನ್ನು ಓದಿ ಗಮನದಲ್ಲಿಟ್ಟುಕೊಳ್ಳಬೇಕಾದದ್ದೇನೆಂದರೆ, ಬರುವ ಆ ಮಹಿಮಾತಿಶಯವಾದ ಕಾಲದಲ್ಲಿ ನೀವು ಸೇರ ಬೇಕೆಂದಿರುವುದಾದರೆ, ನೀವು ಅದಕ್ಕಾಗಿ ಏನದರೂ ಮಾಡಲೇ ಬೇಕು. ನಾಳೆಯ ಆಶೀರ್ವಾದಗಳು, ಇಂದು ನಾವು ದೇವರ ಉದ್ದೇಶದಲ್ಲಿ ಆಸಕ್ತಿಯಿಂದ ತೋರಿಸಿದ ನಿರ್ಧಾರದ ಮೇಲೆ ಮತ್ತು ನಂಬಿ ದೀಕ್ಷಾಸ್ನಾನ ಹೊಂದಿ ನಂಬಿಕೆಯಿಂದ ಅವುಗಳಿಗಾಗಿ ನಮ್ಮನ್ನು ಸಿದ್ಧಪಡಿಸಿಕೊಳ್ಳುವುದರ ಮೇಲೆ ಆತುಕೊಂಡಿದೆ.

ತಿರುಗಿ ಬರುವ ರಾಜ್ಯ :–

"ನೀನು ಎದ್ದು ಚಿಯೋನನ್ನು ಕರುಣಿಸುವಿ. ಅದಕ್ಕೆ ಕೃಪೆ ತೋರಿಸುವ ಸಮಯ ಇದೇ; ನಿಯಮಿತ ಕಾಲ ಬಂದದೆ .... ಇದರಿಂದ ಕರ್ತನೇ ಜನಾಂಗಗಳು ನಿನ್ನ ನಾಮಕ್ಕೂ ಮತ್ತು ಎಲ್ಲಾ ಭೂರಾಜರು ನಿನ್ನ ಪ್ರತಾಪಕ್ಕೂ ಭಯಪಡುವರು. ಕರ್ತನು ತನ್ನ ಮಹಿಮೆಯಲ್ಲಿ ಬಂದು ಚಿಯೋನನ್ನು ತಿರುಗಿ ಕಟ್ಟುವನು" (ಕೀರ್ತನೆ 102:13–16, ಮತ್ತು ಅಪೋಸ್ತಲರ ಕೃತ್ಯಗಳು 1:6, ಮೀಕ 4:7–8 ವಾಕ್ಯಗಳನ್ನು ಸಹ ನೋಡಿ).

ಕರ್ತನ ಸಿಂಹಾಸನ :–

"ಆ ಕಾಲದಲ್ಲಿ ಯೆರೂಸಲೇಮನ್ನು ಕರ್ತನ ಸಿಂಹಾಸನವೆಂದು ಕರೆಯುವರು; ಕರ್ತನ ನಾಮ ಮಹತ್ವದ ಸ್ಥಾನವಾದ ಯೆರೂಸಲೇಮಿಗೆ ಸಕಲ ಜನಾಂಗಗಳವರು ನೆರೆದು ಬರುವರು; ಇನ್ನು ಮೇಲೆ ತಮ್ಮ ದುಷ್ಟಹೃದಯದ ಹಟದಂತೆ ನಡೆಯರು" (ಯೆರೆಮೀಯ 3:17, ಮತ್ತು ಮತ್ತಾಯ 19:28, ಜೆಕರ್ಯ 6:13, ಯೆಹೆಜ್ಕೇಲ 43:7 ವಾಕ್ಯಗಳನ್ನು ಸಹ ನೋಡಿ).

ಜಗತ್ತಿನ ಸರಕಾರ ಮತ್ತು ಸಮಾಧಾನ :–

"ಚಿಯೋನಿನಿಂದ ಧರ್ಮೋಪದೇಶವೂ ಯೆರೂಸಲೇಮಿನಿಂದ ಕರ್ತನ ವಾಕ್ಯವೂ ಹೊರಡುವುವು. ಆತನು ದೇಶದೇಶಗಳ ವ್ಯಾಜ್ಯಗಳನ್ನು ವಿಚಾರಿಸುವನು, ಬಹು ರಾಷ್ಟ್ರದವರಿಗೆ ನ್ಯಾಯತೀರಿಸುವನು; ಅವರೋ ತಮ್ಮ ಆಯುಧಗಳನ್ನು ಕುಲುಮೆಗೆ ಹಾಕಿ ಕತ್ತಿಗಳನ್ನು ಗುಳಗಳನ್ನಾಗಿಯೂ, ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವುದೇ ಇಲ್ಲ" (ಯೆಶಾಯ 2:3–4, ಮತ್ತು ಕೀರ್ತನೆ 72:8, ಅ.ಕೃ.17:31, ಕೀರ್ತನೆ 67:4, ಪ್ರಕಟನೆ 11:15 ವಾಕ್ಯಗಳನ್ನು ಸಹ ನೋಡಿ).

ನಿಜವಾದ ಧರ್ಮದ ಕೇಂದ್ರ :–

"ಅನಂತರ ಯೆರೂಸಲೇಮಿನ ಮೇಲೆ ಬಿದ್ದ ಸಕಲ ಜನಾಂಗಗಳಲ್ಲಿ ಉಳಿದವರೆಲ್ಲರೂ ಸೈನ್ಯಗಳ ಕರ್ತನಾದ ರಾಜಾಧಿರಾಜನನ್ನು ಆರಾಧಿಸುವದಕ್ಕೂ, ಪರ್ಣಶಾಲೆಗಳ ಹಬ್ಬವನ್ನು ಆಚರಿಸುವುದಕ್ಕೂ ಪ್ರತಿ ವರುಷವೂ ಹೊರಟುಬರುವರು" (ಜೆಕರ್ಯ 14:16, ಮತ್ತು ಯೆಶಾಯ2:1–2, ಯೆಹೆಜ್ಕೇಲ 43:18–23, ಕೀರ್ತನೆ 51:18–19 ವಾಕ್ಯಗಳನ್ನು ಸಹ ನೋಡಿ).

ಸಮಾಧಾನದಲ್ಲಿ ಯೆರೂಸಲೇಮ್ :–

"ಯೆರೂಸಲೇಮಿನ ಶುಭಕ್ಕೋಸ್ಕರ.[ಯೆರೂಸಲೇಮೇ] ನಿನ್ನನ್ನು ಪ್ರೀತಿಸುವವರಿಗೆ ಸೌಭಾಗ್ಯವುಂಟಾಗಲಿ. ನಿನ್ನ ಪೌಳಿಗೋಡೆಗಳೊಳಗೆ ಶುಭವುಂಟಾಗಲಿ; ನಿನ್ನ ಅರಮನೆಗಳಲ್ಲಿ ಸೌಭಾಗ್ಯವಿರಲಿ" (ಕೀರ್ತನೆ 122:6–7 ಮತ್ತು ಯೆಶಾಯ 33:20, 52:9, 62:3, 6, 7, 12 ವಾಕ್ಯಗಳನ್ನು ಸಹ ನೋಡಿ).

ಯೆರೂಸಲೇಮಿನಲ್ಲಿ ಯೆಹೂದ್ಯರು :–

"ಬಹು ದೇಶಗಳವರೂ ಬಲವಾದ ಜನಾಂಗಗಳವರೂ ಯೆರೂಸಲೇಮಿನಲ್ಲಿ ಸೈನ್ಯಗಳ ಕರ್ತನನ್ನು ಆಶ್ರಯಿಸುವುದಕ್ಕೂ ಕರ್ತನ ಪ್ರಸನ್ನತೆಯನ್ನು ಬೇಡುವುದಕ್ಕೂ ಬರುವರು. ಸೈನ್ಯಗಳ ಕರ್ತನು ಇಂತೆನ್ನುತ್ತಾನೆ – ಆ ಕಾಲದಲ್ಲಿ ಜನಾಂಗಗಳ ವಿವಿಧ ಭಾಷೆಗಳವರಾದ ಹತ್ತು ಜನರು ಯೆಹೂದ್ಯನೊಬ್ಬನ ಸೆರಗನ್ನು ಹಿಡಿದುಕೊಂಡು–ನಾವು ನಿಮ್ಮೊಂದಿಗೆ ಬರುವೆವು, ದೇವರು ನಿಮ್ಮ ಸಂಗಡ ಇದ್ದಾನೆಂಬ ಸುದ್ದಿಯು ನಮ್ಮ ಕಿವಿಗೆ ಬಿದ್ದಿದೆ ಎಂದು ಹೇಳುವರು" (ಜೆಕರ್ಯ 8:22–23).

ಜಗತ್ತಿನ ಮುಂದಿನ ಭವಿಷ್ಯಕ್ಕೆ ಕೀಲಿಕೈ :–

ಇಸ್ರಾಯೇಲ್ ಜನಾಂಗ ಮತ್ತು ಯೆರೂಸಲೇಮ್ ಪಟ್ಟಣವು ಮುಂದೆ ಮಹಾ ಸಮೃದ್ಧಿಯ ಭವಿಷ್ಯವನ್ನು ಹೊಂದಿದೆ. ಯೆಹೂದ್ಯ ಜನರು ಅವರ ನಿಜವಾದ ದೇವರನ್ನು ಅರಿತುಕೊಂಡು ಅವರಿಗೆ ಅನುಗ್ರಹಿಸಿದ ಅವರ ರಾಜನೂ ಕರ್ತನೂ ಆದ ಯೇಸು ಕ್ರಿಸ್ತನನ್ನು ಸ್ವೀಕರಿಸುವಾಗ, ಅದೇ ಈ ಯುಗದ ನಿಜವಾದ ಅಂತ್ಯವೆಂಬುದನ್ನು ಮತ್ತು ಉನ್ನತವಾದ ಹೊಸ ಯುಗದ ನಿಜವಾದ ಪ್ರಾರಂಭವೆಂಬುದನ್ನು ಸೂಚಿಸುತ್ತದೆ.

ಕರ್ತನಾದ ಯೇಸುಕ್ರಿಸ್ತನ ಆಳ್ವಿಕೆಯಲ್ಲಿ ಜೀವಿಸುವ ಜನರು ಜಗತ್ತು ನಿಜವಾದ ರೀತಿಯಲ್ಲಿ ಓಡುತ್ತಿರುವುದನ್ನು ನೋಡುವ ಭಾಗ್ಯವನ್ನು ಹೊಂದಿಕೊಳ್ಳುವರು.

ನಂಬಿ ದೀಕ್ಷಾಸ್ನಾನ ಹೊಂದಿ ನಂಬಿಕೆಯಿಂದ – ಬರುವ ಆ ಸುಕಾಲಕಾಗಿ ತಮ್ಮನ್ನು ಈಗಲೇ ಸಿದ್ಧಮಾಡಿಕೊಳ್ಳುವವರು ಮತ್ತು ದೇವರು ಅನುಗ್ರಹಿಸಿದ ಮಾರ್ಗದಲ್ಲಿ ಆತನೊಂದಿಗೆ ಸಮಾಧಾನದಿಂದಿರುವವರು– ನಿತ್ಯಜೀವವನ್ನು ಪಡೆದುಕೊಳ್ಳುವರು.

ಈಗ ಮರಣದ ಪಟ್ಟಿಯಲ್ಲಿರುವವರು ಆ ಸುಕಾಲವು ಬರುವಾಗ ಇವರೊಂದಿಗೆ ಸೇರಿ ಆ ಸುಕಾಲದ ಆಶೀರ್ವಾದಗಳನ್ನು ಹೊಂದಿಕೊಳ್ಳುವರು. ದೇವರನ್ನು ಮಹಿಮೆಪಡಿಸುವುದಕ್ಕೂ ಆತನು ನೇಮಿಸಿದ ರಾಜನನ್ನು ಹೊಗಳುವುದಕ್ಕೂ ಜೀವಿಸುವರು. ಯೆಹೂದ್ಯರೂ ಯೆಹೂದ್ಯರಲ್ಲದವರೂ ಒಂದಾಗಿ ಈ ಯುಗದ ಅಂತ್ಯದಲ್ಲಿ, ಬರುವ ಸುಕಾಲದ ಪ್ರಾರಂಭದಲ್ಲಿ, ತಮ್ಮ ನಿಜವಾದ ಸ್ಥಳವನ್ನು ಸೇರಬೇಕೆಂಬುದು ದೇವರ ಯೋಜನೆಯಾಗಿದೆ. ಬರುತ್ತಿರುವ ಸುಕಾಲಕ್ಕೆ ಸೇರಲು ನಿಮ್ಮನ್ನು ಈಗಲೇ ಸಿದ್ಧಪಡಿಸಿಕೊಳ್ಳಿ.

• • • • • • • • • • • • •

ಸತ್ಯವೇದ ಮತ್ತು ಆಧುನಿಕ ಔಷದ

ಈ ಚಿಕ್ಕ ಲೇಖನದಲ್ಲಿ **ಪೌಲ್ ವೆಸ್ಟನ್–ಸ್ಮಿತ್** ರವರು ಕೇಳುತ್ತಾರೆ, ನಾವು ಯೇಸುವನ್ನು ಹಿಂಬಾಲಿಸಿ ನಂಬಿಕೆಯಿಂದ ಜೀವಿಸುವುದಾದರೆ ನಾವು ಸಂತೋಷ ಮತ್ತು ಆರೋಗ್ಯಕರ ಜೀವನವನ್ನು ಹೊಂದಿಕೊಳ್ಳುತ್ತೇವೋ? ಯಾವುದೂ ತನ್ನಷ್ಟಕ್ಕೆ ತಾನೇ ಆಗುವುದಿಲ್ಲ, ಆದರೆ ಸತ್ಯವೇದದ ಸಂದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದರಿಂದ ನಿಜವಾದ ಲಾಭಗಳು ನಮ್ಮನ್ನು ಹಿಂಬಾಲಿಸುತ್ತವೆ ಎಂಬುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ದೇಹವು ಒಂದು ದೇವಾಲಯ :–

ನಾವು **"ನಮ್ಮ ದೇಹವನ್ನು ಪವಿತ್ರಾತ್ಮನ ಆಲಯವಾಗಿ ಕಾಪಾಡಿಕೊಳ್ಳಬೇಕು"** ಎಂಬ ಅಪೋಸ್ತಲ ಪೌಲನ ಸಲಹೆಯನ್ನು ನಮ್ಮಲ್ಲಿ ಅಳವಡಿಸಿಕೊಳ್ಳುವುದಾದರೆ, ನಮ್ಮ ಆರೋಗ್ಯಕ್ಕೆ ಉಂಟಾಗುವ ತೊಂದರೆಗಳನ್ನು ಕಡಿಮೆಮಾಡುವ ದೊಡ್ಡ ಕಾರ್ಯ ಮಾಡುತ್ತೇವೆ. ಅಂದರೆ ಈ ದೇಹವು ದೇವರು ನಮಗೆ ಕೊಟ್ಟಂತದ್ದಾಗಿದ್ದು, ಇದನ್ನು ನಾವು ಸರಿಯಾಗಿ ಕಾಪಾಡಿಕೊಳ್ಳಬೇಕು. ಶರೀರವನ್ನು ಸರಿಯಾಗಿ ಇಟ್ಟುಕೊಳ್ಳಬೇಕೆಂಬ ಒಂದು ಒತ್ತಾದ ಸಂಗತಿ ಈ ದಿವಸಗಳಲ್ಲಿ ಪ್ರಮುಖವಾಗಿದೆ, ಕೆಲವರಿಗೆ ಈ ಸಂಗತಿಯು ಭ್ರಾಂತಿಯೂ ಹೌದು!

ಆದರೆ, ಆರೋಗ್ಯಕರ ಜೀವನದ ಮೂಲವು ಹಿಂದೆ ಒಂದನೇ ಶತಮಾನದ ಕ್ರೈಸ್ತತ್ವದಲ್ಲಿತ್ತು ಮತ್ತು ಇನ್ನೂ ಹಿಂದೆ ಹಳೇಒಡಂಬಡಿಕೆಯಲ್ಲಿ ಮೋಶೆಯ ಧರ್ಮಶಾಸ್ತ್ರದಲ್ಲಿದೆ.

ಸಮೂಹ ಜೀವನದ ಆರೋಗ್ಯ :–

ಒಂದು ಸಾಂಕ್ರಾಮಿಕ ರೋಗವು ನಿರಾಶ್ರಿತರ ಶಿಬಿರಗಳಲ್ಲಿ ಅಥವಾ ಮನೆಗಳು ಬಿಗಿಯಾಗಿ ತುಂಬಿಕೊಂಡಿರುವ ಒಂದು ಹಳ್ಳಿಯಲ್ಲಿ ಎಷ್ಟು ರಭಸವಾಗಿ ಹರಡುತ್ತದೆಂದು ನಮಗೇ ಚೆನ್ನಾಗಿ ಗೊತ್ತದೆ. ಆದರೆ, ಇಸ್ರಾಯೇಲ್ ದೇಶದ ಜನರು ಅದೇ ರೀತಿ ವಾಸಿಸುವಾಗ, ದೇವರು ಅವರಿಗೆ ಸಮೂಹ ಜೀವನದ ಆರೋಗ್ಯದ ಬಗ್ಗೆ ಕಲಿಸಿಕೊಟ್ಟನು ಮತ್ತು ಅದೇ ಈ ದಿವಸದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳಿಗೆ ಮಾರ್ಗದರ್ಶಕವಾಗಿದೆ ಎಂಬ ವಿಷಯ ನಿಮಗೆ ತಿಳಿದಿದೆಯೋ?

ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ನಾಲ್ವತ್ತು ವರ್ಷಗಳು ಮರುಭೂಮಿಯಲ್ಲಿ ಜೀವಿಸುವಾಗ ದೇವರು ಕೊಟ್ಟ ನಿಯಮಗಳೇ ಅವರಿಗೆ ಮಾರ್ಗದರ್ಶಕರಾಗಿ ಕಾರ್ಯ ಮಾಡಿದವು. ಅದಾದ ನಂತರ ಅವರು ಇಸ್ರಾಯೇಲ್ ಪ್ರದೇಶದಲ್ಲಿ ಒಂದೇ ದೇಶವಾಗಿ ಜೀವಿಸುವಾಗ ಒಳ್ಳೆಯ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದವು. ದೇವರು ಕೊಟ್ಟ ನಿಯಮಗಳು ಅವರನ್ನು ಸುತ್ತುವರೆದ ದೇಶಗಳಿಂದ ಬೇರೆಯಾಗಿ ಮಾಡಿದವು ಮತ್ತು ಅವರು ಇದ್ದ ನಿಯಮಗಳಿಂದ ಬೇರೆಯಾಗಲಿಲ್ಲ, ಇದಕ್ಕೆ ದೂರವಾದದ್ದು! ಅವುಗಳು ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆದವು(ಮುಖ್ಯವಾಗಿ ಚರ್ಮರೋಗಗಳು) ಮತ್ತು ಸರಿಯಾದ ಆಹಾರ ಪದಾರ್ಥಗಳ ಆಯ್ಕೆಗಾಗಿ, ತ್ಯಾಜ್ಯ ವಸ್ತುಗಳ ಸರಿಯಾದ ನಿರ್ವಹಣೆಗಾಗಿ, ಒಳ್ಳೇ ನೀರಿನ ಪೂರೈಕೆಗಾಗಿ ಹಾಗೂ ಬೇಕಾದ ಉತ್ತಮ ಮಟ್ಟದ ಪದಾರ್ಥಗಳ ಪೂರೈಕೆಗಾಗಿ ಸರಿಯಾದ ನಿಯಂತ್ರಣವನ್ನು ಅವರಿಗೆ ತಂದುಕೊಟ್ಟವು.

ಉದಾಹರಣೆ : ಮನುಷ್ಯನ ದೇಹದ ವಿಸರ್ಜಿತ ವಸ್ತುಗಳ ನಿರ್ವಹಣೆಯ ಬಗ್ಗೆ ಒಂದು ಸರಳ ಶಿಕ್ಷಣವು(ಧರ್ಮೋಪದೇಶಕಾಂಡ 23:13) ಸಲಹೆ ಮಾಡುವುದೇನೆಂದರೆ – ವಿಸರ್ಜಿತ ವಸ್ತುವನ್ನು ಮನುಷ್ಯರು ವಾಸಿಸುವ ಸ್ಥಳದಿಂದ ಬಹುದೂರದಲ್ಲಿ ಭೂಮಿಯೊಳಗೆ ಮುಚ್ಚಿಬಿಡಬೇಕು. ಈ ಒಂದು ಕ್ರಮವು ಹೊಟ್ಟೆಯೊಳಗಿನ ಸೋಂಕು ರೋಗಗಳನ್ನು ಕಡಿಮೆ ಮಾಡುತ್ತದೆ. ಇನ್ನೂ ವಿಲಕ್ಷಣವಾಗಿ, ಮಧ್ಯಕಾಲೀನ ಸಮಯಗಳವರೆಗೆ ಈ ಕ್ರಮವು ಬಹಳ ದೇಶಗಳಲ್ಲಿ ಮರೆತುಹೋದ ಪಾಠವಾಗಿತ್ತು. ಯಾಕಂದರೆ, ಆ ಸಮಯಗಳಲ್ಲಿ ವಿಸರ್ಜಿತ ವಸ್ತುಗಳನ್ನು ಬೀದಿಗಳಿಗೆ ಬಿಸಾಡಲಾಗುತ್ತಿತ್ತು ಮತ್ತು ಈ ಕಾರಣದಿಂದ ಇದು ಸೋಂಕುಗಳಿಗೂ, ಖಾಯಿಲೆಗಳಿಗೂ ನಿಜವಾದ ಮೂಲವಾಗಿತ್ತು.

ವೈಯುಕ್ತಿಕ ಆರೋಗ್ಯ :–

ರೋಗವು ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಹರಡಬಹುದು ಮತ್ತು ರೋಗಕ್ಕೆ ಒಳಪಟ್ಟ ವ್ಯಕ್ತಿಯು ಗುಣವಾಗುವವರೆಗೆ ಬೇರೆಯಾಗಿ ಇದ್ದರೆ ಆ ರೋಗವು ಹರಡುವ ಅವಕಾಶಗಳು ಕಡಿಮೆ ಎಂಬುದನ್ನು ದೇವರ ನಿಯಮವು ತೋರಿಸಿಕೊಟ್ಟಿತು. ಆ ನಿಯಮವು ಶುದ್ಧ ಮತ್ತು ಅಶುದ್ಧ ಆಹಾರ ಪದಾರ್ಥಗಳನ್ನು ಸಹ ಪಟ್ಟಿಮಾಡಿಕೊಟ್ಟಿದೆ.

ಸಮಯಕ್ಕನುಸಾರವಾಗಿ ಇಚ್ಛಾನುಸಾರವಾದ ನಿಯಮ–ಕಟ್ಟುಗಳಿರಬಹುದು. ಆದರೆ ಹಂದಿ ಮಾಂಸದ ಉದಾಹರಣೆ ತೆಗೆದುಕೊಳ್ಳುವುದಾದರೆ: ಹಂದಿ ಮಾಂಸವನ್ನು ತಿನ್ನದೇ ಇರುವುದರಿಂದ, ಹಂದಿ ಮಾಂಸವನ್ನು ತಿನ್ನುವುದರಿಂದ ಬರುವ ದೊಡ್ಡ ರೋಗಗಳನ್ನು ಬರದಂತೆ ಕಾಪಾಡಿಕೊಂಡರು. ಪಿಗ್ ಟೇಪ್‌ವರ್ಮ್–*The pig tapeworm*(ಟೇನಿಯಾ ಸೋಲಿಯಮ್ –*Taenia soilium*) ಮತ್ತು ಪಿಗ್ ರೌಂಡ್‌ವರ್ಮ್– *The pig roundworm* (ಟ್ರಿಚಿನೆಲ್ಲಾ ಸ್ಪೈರಾಲಿಸ್–*Trichinella spiralis*) ಎಂಬ ಈ ಎರಡು ರೋಗಗಳು ಹಂದಿ ಮಾಂಸವನ್ನು ತಿನ್ನುವುದರಿಂದ ಬರುವ ಮುಖ್ಯರೋಗಗಳಲ್ಲಿ ಎರಡು.

ಇವು ಬಹಳ ಗಂಭೀರವಾದ ಮತ್ತು ಮರಣ ತರುವ ರೋಗಗಳಾಗಿವೆ. ಆಧುನಿಕ ಕೃಷಿ ವಿಧಾನಗಳು ಮತ್ತು ಸರಿಯಾದ ಆಹಾರ ತಯಾರಿಸುವ ವಿಧಾನಗಳು ಆ ರೀತಿಯ

ರೋಗಗಳನ್ನು ಈ ದಿನಗಳಲ್ಲಿ ಕಡಿಮೆಯಾಗುವಂತೆ ಮಾಡಿವೆ. ಆದರೆ ಆ ದಿನಗಳಲ್ಲಿ ಅಂಥಹ ರೋಗಗಳು ಆರೋಗ್ಯಕ್ಕೆ ಕಠೋರವಾದ ಅಪಾಯಗಳಾಗಿದ್ದವು.

ದುಶ್ಚಟಗಳ ಬಗ್ಗೆ ಎಚ್ಚರ :–

ಮದ್ಯಪಾನ, ತಂಬಾಕು ಮತ್ತು ಅವೈದಕ ವಸ್ತುಗಳ ಚಟವು ನಮ್ಮ ಸಮಾಜದ ಅನಾರೋಗ್ಯಕ್ಕೆ ದೊಡ್ಡ ಕಾರಣವಾಗಿ ನಿಂತಿದೆ. ಅವೈದಕ ಮದ್ದು ಮತ್ತು ತಂಬಾಕು ಈ ಎರಡನ್ನೂ ನೋಡುವಾಗ ಇವು ಆಧುನಿಕತೆಯ ವಿಷಯಗಳಾಗಿವೆ. ಆದರೆ ಸಾಮಾನ್ಯ ಸತ್ಯಾಂಶವೆಂದರೆ, ಅವುಗಳ ಚಟ. ಮದ್ಯಪಾನದ ಚಟವು ಈಗಿನ ಹಾಗೆ ಸತ್ಯವೇದದ ಹಿಂದಿನ ಕಾಲಗಳಲ್ಲಿಯೂ ದೊಡ್ಡ ತೊಂದರೆಯಾಗಿಯೇ ಇತ್ತು. ನೇಣು ಹಾಕುವ ಮತ್ತು ನಾಶಮಾಡುವ ಮದ್ಯಪಾನದ ಪರಿಣಾಮಗಳ ಉತ್ತಮ ವಿವರಣೆಗಾಗಿ ಜ್ಞಾನೋಕ್ತಿಗಳು 23:29–35 ವಾಕ್ಯಗಳನ್ನು ಓದಿ. **"ಯಾವಾಗ ಎಚ್ಚೆತ್ತೇನು? ಪುನಃ ಅದನ್ನೇ ಹುಡುಕೇನು"** ಎಂಬ ಕುಡುಕನ ಮಾತಿನಿಂದ ಆ ವಾಕ್ಯ ಭಾಗವು ಮುಕ್ತಾಯಗೊಂಡಿದೆ.

ಮದ್ಯಪಾನದ ಅಭ್ಯಾಸವು ವಿಷವಾಗಿದೆ ಮತ್ತು ಅದು ಪಿತ್ತಾಶಯ, ಮೆದುಳು ಹಾಗೂ ಹೃದಯಗಳಿಗೆ ಹಾನಿ ಮಾಡುತ್ತದೆ. ಅದನ್ನೇ ಆತುಕೊಳ್ಳುವ ಹಾಗೆ ಮಾಡಿ ಕೊನೆಗೆ ಅವುಗಳನ್ನು ನಾಶ ಮಾಡುತ್ತದೆ. ಈ ದುರ್ಗತಿಯು ಅವೈದಕ ಮದ್ದು ತಂಬಾಕುಗಳನ್ನು ಮತ್ತು ಇಂತವುಗಳನ್ನು ಆತುಕೊಂಡಿರುವವರಿಗೂ ಸಾಮಾನ್ಯವಾಗಿದೆ. ಈ ಕೆಟ್ಟ ಚಟಗಳಿಗೆ ವಿರುದ್ಧವಾಗಿ ಹಳೆಯ ಒಡಂಬಡಿಕೆಯು ಎಚ್ಚರಿಸುವ ರೀತಿಯಲ್ಲೇ ಹೊಸ ಒಡಂಬಡಿಕೆಯ ಬರಹಗಾರರು ಸಹ ನಾವು ದುಶ್ಚಟಗದ ಸಮಸ್ಯೆಗಳಿಂದ ಹೊರಬರುವಂತೆ ಪ್ರೋತ್ಸಾಹಿಸುತ್ತಾರೆ(1ತಿಮೋಥೆ 5:23). ಅಪೋಸ್ತಲನಾದ ಪೌಲನು ಸಹ ಇದರ ಬಗ್ಗೆ ಉತ್ತಮವಾದ ಸಲಹೆ ನೀಡಿದ್ದಾನೆ, "ಮದ್ಯಪಾನ ಮಾಡಿ ಮತ್ತರಾಗಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ. ಬದಲಾಗಿ ಆತ್ಮನಿಂದ ತುಂಬಿದವರಾಗಿರಿ" (ಎಫೆಸ 5:18).

ಲಕ್ಷತೆ ಮತ್ತು ಉತ್ತೇಜನ :–

ಶಾರೀರಿಕ ಅಸ್ವಸ್ಥತೆಯ ನಿರ್ವಹಣೆಯ ಬಗ್ಗೆಯು ಸತ್ಯವೇದದ ವಿವರಣೆಯು ಸಮಯದ ನಿಯಮಿತವಾದ ತಿಳುವಳಿಕೆಯನ್ನು ಪ್ರತಿಬಿಂಬಿಸುತ್ತದೆ. ರೋಗಿಗಳ ಬಗ್ಗೆ ಲಕ್ಷತೆವಹಿಸುವ ಮತ್ತು ಅವರ ಹಾಗೂ ಅವರ ಕುಟುಂಬದವರಿಗೆ ಸಹಾಯಮಾಡುವ ನಿಯಮವು ದೇವರ ನಿಯಮದೊಳಗೆ ಇದೆ. ಈ ನಿಯಮವು ಯೇಸು ಗುಣಮಾಡಿದ ಅದ್ಭುತಗಳಲ್ಲೂ ಪ್ರತಿಬಿಂಬಿಸಲ್ಪಟ್ಟಿದೆ.

ಒಳ್ಳೇ ಸಮಾರ್ಯದವನ ಬಗ್ಗೆ ಹೇಳಿದ ಸಾಮ್ಯವು ಲಕ್ಷತೆ ವಹಿಸುವ ಮತ್ತು ಉತ್ತೇಜನ ನೀಡುವ ಬಗ್ಗೆ ಯೇಸು ನಿಶ್ಚಯಿಸಿದ ಮಾರ್ಗದ ಒಂದು ಉದಾಹರಣೆಯಾಗಿದೆ. ಈ ಉದಾಹರಣೆಯನ್ನು ಅಗತ್ಯದಲ್ಲಿರುವವರ ಬಗ್ಗೆ ನಮಗಿರಬೇಕಾದ ಸ್ವಂತ ಜವಾಬ್ದಾರಿಗೆ ಒಂದು ಮಾದರಿಯಾಗಿ ಕೊಡಲ್ಪಟ್ಟಿದೆ. ಹೇಗಂಗರೆ,

"ಆ ಸಮಾರ್ಯದವನು ಗಾಯಗೊಂಡು ಬಿದ್ದಿದ್ದ ಮನುಷ್ಯನನ್ನು ಕಂಡು ಕನಿಕರಿಸಿ ಅವನ ಹತ್ತಿರ ಹೋಗಿ ಅವನ ಗಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯ್ದು ಕಟ್ಟಿ ಮೊದಲ ಆರೈಕೆ ಮಾಡಿ ಅವನನ್ನು ತಕ್ಷಣದ ಸಂಕಟದಿಂದ ಗುಣಮಾಡಿದನು ಮತ್ತು ನಂತರದ ಆರೈಕೆಗಾಗಿ ಅವನನ್ನು ತನ್ನ ಸ್ವಂತ ವಾಹನದ ಮೇಲೆ ಹತ್ತಿಸಿಕೊಂಡು ಛತ್ರಕ್ಕೆ ಕೊಂಡೊಯ್ದನು" (ಲೂಕ 10:30–37).

ಮೊದಲ ಪ್ರಪಂಚ ಯುದ್ಧವಾದ ನಂತರವಾದರೂ, ಆಧುನಿಕ ವೈದ್ಯಶಾಸ್ತ್ರ ಹಾಗೂ ಔಷದಗಳು ದೊಡ್ಡ ರೋಗಗಳನ್ನು ಮತ್ತು ಅವ್ಯವಸ್ಥೆಗಳನ್ನು ಜಯಿಸಿವೆ ಅಥವಾ ನಿರ್ವಹಿಸುವಂತೆ ಮಾಡಿವೆ. ಈ ವೈದ್ಯಜ್ಞಾನವನ್ನು ಪ್ರಪಂಚದ ಎಲ್ಲೆಡೆ ವಿಸ್ತರಿಸಲು ಬೇಕಾದ ಸಾಮರ್ಥ್ಯ ಬಹಳವಾಗಿ ಇದ್ದರೂ, ರಾಜಕೀಯ ಕಾರಣಗಳಿಂದ ಮತ್ತು ವೈಯಕ್ತಿಕ ದುರಾಶೆಯ ನಿಮಿತ್ತ ಹಂಚಿಕೊಳ್ಳುವ ಮತ್ತು ಇನ್ನೂ ಕಲಿತುಕೊಳ್ಳುವ ಪ್ರಮಾಣ ಬಹಳ ಕುಂಠಿತಗೊಂಡಿದೆ. ಈ ಸಮಸ್ಯೆಗೆ ತಕ್ಷಣವಾಗಿ ಯಾವ ಮನುಷ್ಯರಿಂದಲೂ ಪರಿಹಾರವಿಲ್ಲ. ಆದರೆ, ದೇವರು ಎಲ್ಲಾ ಮನುಷ್ಯರನ್ನು ಸಂಪೂರ್ಣವಾದ ಆರೋಗ್ಯದಲ್ಲಿಡುವ ಯೋಜನೆಯನ್ನು ಇಟ್ಟುಕೊಂಡಿದ್ದಾನೆ.

ಆದ್ದರಿಂದ ಆತನು ಒಮ್ಮೆ **"ಒಳ್ಳೆಯ ವೈದ್ಯನು"** ಎಂದು ಕರೆಯಲ್ಪಟ್ಟ ಕರ್ತನಾದ ಯೇಸುವನ್ನು ಈ ಭೂಮಿಗೆ ತಿರುಗಿ ಕಳುಹಿಸಿಕೊಡುತ್ತಾನೆ. ಆತನು ಈ ಲೋಕಕ್ಕೆ ಬಹಳ ಬೇಗನೇ ಬೇಕಾಗಿರುವ ಲಕ್ಷತೆ ಮತ್ತು ಉತ್ತೇಜನವನ್ನು ತರುತ್ತಾನೆ. ಸತ್ಯವೇದದಲ್ಲಿ ಬರೆಸಿರುವ ವಾಗ್ದಾನದ ಪ್ರಕಾರವೇ ಬರುತ್ತಾನೆ– "ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ ದೇವರ **ಧರ್ಮವೆಂಬ ಸೂರ್ಯನು** ಸ್ವಸ್ಥತೆಯನ್ನುಂಟುಮಾಡುವ ಕಿರಣಗಳುಳ್ಳವನಾಗಿ ಮೂಡುವನು" (ಮಲಾಕಿ 4:2).

ಸಂತೋಷ ಮತ್ತು ಆರೋಗ್ಯದ ಜೀವನವನ್ನು ನಾವು ಬಯಸುವುದಾದರೆ, ಕರ್ತನಾದ ಯೇಸುವಿನ ಉಪದೇಶಕ್ಕೂ ಆತನು ಕೊಟ್ಟ ಉದಾಹರಣೆಗಳಿಗೂ ನಾವು ನಮ್ಮ ಸಂಪೂರ್ಣ ಆಸಕ್ತಿ ಕೊಡುವುದಕ್ಕಿಂತ ಮಾಡಬೇಕಾದ ಕೆಲಸ ಬೇರೆ ಇಲ್ಲ. ಆತನೊಬ್ಬನೇ ನಮ್ಮನ್ನು ಸಂತೋಷಭರಿತರಾಗಿಯೂ ಸಂಪೂರ್ಣ ಆರೋಗ್ಯವಂತರಾಗಿಯೂ ಮಾಡಬಲ್ಲವನು ಮತ್ತು ಅದಕ್ಕಿಂತ ಉತ್ತಮವಾದದ್ದನ್ನು ನಾವು ಹೇಳಲು ಸಾಧ್ಯವೇ ಇಲ್ಲ!

–ಪೌಲ್ ವೆಸ್ಟನ್–ಸ್ಮಿತ್

ಮರಣ (ಲಘು ಧ್ಯಾನ)

"ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣಶಕ್ತಿಯಿಂದ ಮಾಡು; ನೀನು ಹೋಗುವ ಪಾತಾಳ(ಸಮಾಧಿ)ದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯು ಜ್ಞಾನವೂ ಇರುವುದಿಲ್ಲ" (ಪ್ರಸಂಗಿ 9:10).

ಮರಣಕ್ಕಿಂತ ಸಾಮಾನ್ಯವಾದ ಯಾವ ಸಂಗತಿಯು ಇಲ್ಲ, ಪ್ರತಿದಿನವೂ ಇದು ನಮ್ಮ ಸುತ್ತಮುತ್ತಲೂ ಹೋಗುತ್ತಲೇ ಇರುತ್ತದೆ. ಅನೇಕ ಸಮಯಗಳಲ್ಲಿ ಮರಣದ ಪಟ್ಟಿಯು ಹೆಸರುಗಳನ್ನು ಮಾತ್ರ ಹೊಂದಿರುತ್ತದೆ,

ಆದರೆ ಈಗ ಮತ್ತು ನಂತರ ನಮ್ಮ ಕುಟುಂಬದಲ್ಲಿನ ಒಬ್ಬರ ಹೆಸರು ಕಾಣಿಸಲ್ಪಡುತ್ತದೆ, ಮತ್ತು ಖಚಿತವಾಗಿ, ಬರುವ ಸಮಯದಲ್ಲಿ ಸಂಗತಿಗಳು ಮುಂದುವರೆಯುತ್ತಾ ಹೋಗುವಾಗ ಒಂದು ದಿವಸ ನಮ್ಮ ಹೆಸರು ಕೂಡ ಮರಣದ ಪಟ್ಟಿಯನ್ನು ಸೇರುತ್ತದೆ.

ಮರಣದ ವಾಸ್ತವವಾದ ಹಗೆತನದಲ್ಲಿ ತಾವು ಎಂದೆಂದಿಗೂ ಬಾಳುವವರೆಂಬದಾಗಿ ಬಾಳುತ್ತಿರುವ ಮನುಷ್ಯರೆಲ್ಲರನ್ನೂ ನೋಡುವುದು ಸಾಮಾನ್ಯವಾಗಿದೆ. ಬಹುಶಃ ನಾವು ಆಶಾವಾದಿಗಳಾಗಿರುವದರಿಂದ ಆದರೆ ಹೆಚ್ಚಾಗಿ ನಾವು ಯಾವ ಸುಖಕರವಲ್ಲದ ಸಂಗತಿಗಳನ್ನು ಎದುರಿಸಲು ಇಷ್ಟವಿಲ್ಲದೇ ಇರುವುದರಿಂದ, ನಮ್ಮ ಮನಸ್ಸಿನಿಂದ ನಾವು ಹೊರಹಾಕಲ್ಪಡಲು ಹೋಗುತ್ತೇವೆ. ಈ ಸಂಗತಿಯಿಂದ ನಾವು ನೇರವಾಗಿ **ಪಾತಾಳದೆಡೆಗೆ(ಸಮಾಧಿಗೆ)** ಹೋಗುತ್ತಿದ್ದೇವೆ.

ಬಹಳ ಜನರು ಕೊನೆಯ ಕ್ಷಣದಲ್ಲಿ ಬಿರುಕು ಹೊಡೆದು ಪಾತಾಳಕ್ಕೆ ಮುಳುಗುವವರೆಗೂ ಮಾನವತ್ವದ ಸಾಗರದಲ್ಲಿ ಯಾವ ಗೊತ್ತುಗುರಿಯಿಲ್ಲದೆ ಹೋಗುತ್ತಿರುವರು. ಅವರ ಎಲ್ಲಾ ಹಣ, ಎಲ್ಲಾ ಯೋಚನೆಗಳು ಕ್ಷುಲ್ಲಕ ಮತ್ತು ಮುಖ್ಯವಲ್ಲದ ವಿವರನೆಗಳಿಗೆ ಒಪ್ಪಿಸಲ್ಪಟ್ಟಿವೆ. ನಮ್ಮ ನೆರೆಹೊರೆಯವರಿಗೆ ಮತ್ತು ಜೊತೆ ಕೆಲಸದವರಿಗೆ ಆಸಕ್ತಿಯಾಗುವ ಸಂಭಾಷಣೆಯ ವಿವರಗಳನ್ನು ತೆಗೆದುಕೊಳ್ಳೋಣ. ಕ್ರೀಡೆ, ದೂರದರ್ಶನ, ಕಾರುಗಳು, ರಜೆಗಳು ಮತ್ತು ಹಲವು., ಈ ಮುಂದೆ ತಿಳಿಸಿರುವ ಕೀರ್ತನೆಯ ಪದಗಳು ಎಷ್ಟು ಸತ್ಯವಾಗಿವೆ "ಶೂನ್ಯವು ಆತನ ದೊಡ್ಡ ಆಸೆ, ಗದ್ದಲ ಮತ್ತು ಪ್ರದರ್ಶನ, ಶೂನ್ಯವಾದುವುಗಳೇ ಆತನ ಮನಸ್ಸನ್ನು ನಾಶಮಾಡುವ ವಿಷಯಗಳು. ಆತನು ಸಂಕಟಗಳಿಂದ ಕೂಡಿದ ಆಸ್ತಿಯನ್ನು ಗುಡ್ಡೆಮಾಡಿಟ್ಟುಕೊಳ್ಳುತ್ತಾನೆ, ಆತನು ಸಾಯುತ್ತಾನೆ ಮತ್ತು ಎಲ್ಲವನ್ನು ಬಿಟ್ಟು ಹೋಗುತ್ತಾನೆ".

ಸೊಲೋಮೋನನು ನಮಗೆ ಎಚ್ಚರಿಸುವ ಮುಖ್ಯಸಂಗತಿ ಇದೇ. ಏನಾದರೂ ಹುಡುಕಿಕೊಂಡು ಪೂರ್ಣಶಕ್ತಿಯಿಂದ ಸಾಧಿಸಲು ಇದೇ ತಕ್ಕ ಸಮಯ. ನಾವು ಎಷ್ಟು ಕಾಲ ಬದುಕಿದೆವೆಂಬುದು ಹೇಗೆ ಬದುಕಿದೆವೆಂಬಷ್ಟು ಮುಖ್ಯವಾದುದಲ್ಲ. ಈ ಭೂಮಿಯ ಮೇಲೆ ಮೆಯೂಷೆಲಹನು ಬದುಕಿದ್ದು 969 ವರ್ಷಗಳು, ಕ್ರಿಸ್ತನು ಬದುಕಿದ್ದು 33 ವರ್ಷಗಳಷ್ಟೆ. ಮೆತೂಷೆಲಹನು ತನ್ನೆಲ್ಲಾ ವರ್ಷಗಳಲ್ಲಿ ಏನು ಮಾಡಿದನೆಂದು ನಮಗೆ ಗೊತ್ತಿಲ್ಲ, ಆದರೆ ಕ್ರಿಸ್ತನು ಕೇವಲ ಮೂರುವರೆ ವರ್ಷದ ತನ್ನ ಸೇವೆಯಲ್ಲಿ ಏನೆಲ್ಲಾ ಸಾಧಿಸಿದನು.

ನಾವು ಬದುಕಿರುವವರೆಗೂ ನಾವು ಮಾಡಬೇಕಾದ ಕಾರ್ಯವಿದೆ. ಆ ಕಾರ್ಯವನ್ನು ಹುಡುಕಿಕೊಂಡು ಮಾಡುವುದು ನಮ್ಮ ಜವಾಬ್ದಾರಿ. ಇದಕ್ಕಿಂತ ಹೆಚ್ಚಿನದು ಇದಕ್ಕಿದೆ, ನಮ್ಮ ಎಲ್ಲಾ ಶಕ್ತಿಯಿಂದ ನಾವು ಇದನ್ನು ಮಾಡಬೇಕು. ಅರ್ದ ಹೃದಯದ ಪ್ರಯತ್ನದಿಂದ ಮಾಡಲಾಗುವದಿಲ್ಲ. ಈ ದಿನ ಎಷ್ಟು ಚಿಕ್ಕದನ್ನು ಮಾಡಲಾಗುವದೋ, ಅಷ್ಟು ಚಿಕ್ಕದನ್ನು ಮಾಡಿ ಮುಂದೆ ಹೋಗುವಂತಹ ಪ್ರವೃತ್ತಿ ಇದೆ. ಆದರೆ ನಮ್ಮ ಶಕ್ತಿಯಿಂದ ಏನೋ ಸ್ವಲ್ಪವನ್ನು ಮಾಡುವಂತ ಉಪಾಯವು ಎಣಿಸಲ್ಪಡುವುದೇ ಇಲ್ಲ. ಮಾಡಲೇಬೇಕಾದ ಪ್ರಮಾಣವೆಷ್ಟೆಂಬುದನ್ನು ಮತ್ತು ಗುರಿಯನ್ನು ಹುಡುಕು. ದೇವರ ರಾಜ್ಯವನ್ನು ಪ್ರವೇಶಿಸಲು ನಾವು ಮಾಡಬೇಕಾದ ಪ್ರಮಾಣವೆಷ್ಟೆಂದರೆ, ನಮ್ಮಿಂದ ಮಾಡಬಹುದಾದ ಅತ್ಯುತ್ತಮವಾದದ್ದೇ. ಯೇಸು ನಮಗೆ ಹೀಗೆ ತಿಳಿಸಿದ್ದಾನೆ –"ನೀವು ನಿಮಗೆ ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ, ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ" (ಲೂಕ 17:10). ನಾವು ಜ್ಞಾಪಿಸಿಕೊಳ್ಳಬೇಕಾದದ್ದೇನೆಂದರೆ, ನಿತ್ಯಜೀವವು ದೇವರು ಕೊಡುವ ಉಡುಗೊರೆಯಾಗಿದೆ ಮತ್ತು ಆತನು ಅದನ್ನು ಪೂರ್ಣ ಸಾಮರ್ಥ್ಯದಿಂದ ಆತನಿಗೆ ಸೇವೆ ಸಲ್ಲಿಸಿದವರಿಗೆ ಮಾತ್ರ ದಯಪಾಲಿಸುತ್ತಾನೆ.

ನಮಗೆ ತಿಳಿದಿದೆ, ಪಾತಾಳದಲ್ಲಿ(ಸಮಾಧಿಯಲ್ಲಿ) ಯಾವ ಕೆಲವವೂ ಇಲ್ಲ, ಯಾವ ಸಾಧನವೂ ಇಲ್ಲ, ಯಾವ ತಿಳುವಳಿಕೆಯೂ ಇಲ್ಲ, ಯಾವ ಜ್ಞಾನವೂ ಇಲ್ಲ. ಒಳ್ಳೇದೇನೆಂದರೆ, ಈಗ ಮಾಡಬೇಕಾಗಿರುವ ಕೆಲಸವನ್ನು ಹುಡುಕೋಣ ಮತ್ತು ಪೂರ್ಣ ಸಾಮರ್ಥ್ಯದಿಂದ ಮಾಡೋಣ. ನಾವು ಎಷ್ಟು ಕಾಲ ಬದುಕುತ್ತೇವೆಂಬುದು ಮುಖ್ಯವಲ್ಲ, ಆದರೆ ನಾವು ನಮ್ಮ ಉಳಿದ ಜೀವಿತವನ್ನು ಹೇಗೆ ಜೀವಿಸುತ್ತೇವೆಂಬುದೇ ಮುಖ್ಯ. ಈ ಜೀವಿತವು ಯೇಸುಕ್ರಿಸ್ತನು ಪ್ರತಿಯೊಬ್ಬರಿಗೂ ತನ್ನತನ್ನ ಕೃತ್ಯಗಳ ಪ್ರಕಾರ ಪ್ರತಿಫಲವನ್ನು ಕೊಡುವುದಕ್ಕೋಸ್ಕರ ತಿರುಗಿ ಬಂದಾಗ ಆತನಿಂದ ಸದುತ್ತರವನ್ನು ಪಡೆದುಕೊಳ್ಳುತ್ತದೆ.

• • • • • • • • • • • •

ದೇವರ ಮನೆಯ ನಿರ್ಮಾಣ

ಡಡ್ಲೀ ಫೀಫೀಲ್ಡ್(ಡಡ್ಲೀ ಪಿಪಿಲ್ಡ್)ರವರು ಸತ್ಯವೇದದ ಇತಿಹಾಸವನ್ನು ಶೋಧಿಸುತ್ತಾ ಅರಸನಾದ ದಾವೀದನು ಯೆರೂಸಲೇಮಿನಲ್ಲಿರುವ ದೇವರ ರಾಜ್ಯವನ್ನು ಆಳಿರುವ ಮತ್ತು ಅವನು ಅಲ್ಲಿ ಮುವತ್ತ ಮೂರು ವರ್ಷಗಳ ಕಾಲ ಹೊಂದಿದ್ದ ಸ್ಥಾನದ ಸಮಯವನ್ನು ತಲುಪಿದ್ದಾರೆ. ಆ ಸಮಯಗಳಲ್ಲಿ ದೇವರು ದಾವೀದದನೊಟ್ಟಿಗೆ ಶಾಶ್ವತವಾಗಿ ಮಹತ್ತಾದ ಒಡಂಬಡಿಕೆಯನ್ನು ಮಾಡಿಕೊಂಡನು.

ದಾವೀದನಿಗೆ ತನ್ನ ಜೀವನದ ಒಂದು ದೊಡ್ಡ ಆಸೆ ಇತ್ತು. ಅದು ಇಸ್ರಾಯೇಲ್ಯರ ದೇವರಿಗೆ ಒಂದು ಮನೆಯನ್ನು ಅಥವಾ ಆಲಯವನ್ನು ಕಟ್ಟುವ ಆಸೆ. ಈ ತನ್ನ ಆಸೆಯನ್ನು ದಾವೀದನು ಪ್ರಾರ್ಥಿಸುವಾಗ ತನ್ನ ಕೀರ್ತನೆಗಳಲ್ಲೊಂದರಲ್ಲಿ ಈ ರೀತಿಯಾಗಿ ಸ್ಮರಿಸಿಕೊಂಡಿದ್ದಾನೆ–

"ಯೆಹೋವನೇ, ದಾವೀದನ ಹಿತಕ್ಕೋಸ್ಕರ ಅವನ ಶ್ರಮಗಳನ್ನು ನೆನಪುಮಾಡಿಕೋ, ಅವನು ಯಾಕೋಬ್ಯರ ಶಕ್ತಿಶಾಲಿ ದೇವರಾಗಿರುವ ಯೆಹೋವನಿಗಾಗಿ ಒಂದು ವಾಸಸ್ಥಾನವನ್ನು ಏರ್ಪಡಿಸುವ ತನಕ ನಾನು ನನ್ನ ಮನೆಯೊಳಗೆ ಪ್ರವೇಶಿಸುವುದಿಲ್ಲ, ಮಂಚವನ್ನು ಹತ್ತುವುದಿಲ್ಲ,

ಕಣ್ಣುಗಳನ್ನು ಮುಚ್ಚುವುದಿಲ್ಲ, ರೆಪ್ಪೆಗಳನ್ನು ಕೂಡಿಸುವುದಿಲ್ಲ ಎಂದು ಅವನು ಯಾಕೋಬ್ಯರ ಶೂರನಾದ ಯೆಹೋವನಿಗೆ ಪ್ರಮಾಣದಿಂದ ಹರಕೆ ಮಾಡಿಕೊಂಡನಲ್ಲಾ" (ಕೀರ್ತನೆ 132:1–5; ಮತ್ತು 1ಪೂರ್ವಕಾಲವೃತ್ತಾಂತ 28:1–6, 29:1–5 ವಾಕ್ಯಗಳನ್ನೂ ನೋಡಿ).

ದಾವೀದನ ಈ ಅನುಭವು ಆತನು ತನ್ನ ಆಳ್ವಿಕೆಯ ಉನ್ನತಿಯಲ್ಲಿ ದೇವರ ಪ್ರವಾದಿಯಾದ ನಾತಾನನ್ನು ಕರೆದು ತಾನು ದೇವರಿಗೆ ಒಂದು ಮನೆಯನ್ನು ಕಟ್ಟಬೇಕೆಂದಿದ್ದ ಉದ್ದೇಶವನ್ನು ಹೇಳಿದ್ದಕ್ಕೆ ಪ್ರತಿಯಾಗಿದೆ. "ನೋಡು, ನಾನು ದೇವದಾರು ಮರದ ಮನೆಯಲ್ಲಿ ವಾಸವಾಗಿದ್ದೇನೆ; ದೇವರ ಮಂಜೂಷವಾದರೋ ಬಟ್ಟೆಯ ಮನೆಯಲ್ಲಿ ಇರುತ್ತದೆ ಎಂದು ಹೇಳಿದನು. ನಾತಾನನು ಅರಸನಿಗೆ– ಆಗಲಿ ಮನಸ್ಸಿದ್ದಂತೆ ಮಾಡು, ಯೇಹೋವನು ನಿನ್ನ ಸಂಗಡ ಇದ್ದಾನೆ ಅಂದನು. ಅದೇ ರಾತ್ರಿಯಲ್ಲಿ ಯೆಹೋವನು ನಾತಾನನಿಗೆ ಆಜ್ಞಾಪಿಸಿದ್ದೇನೆಂದರೆ– ಹೋಗಿ ನನ್ನ ಸೇವಕನಾದ ದಾವೀದನಿಗೆ ಹೇಳಬೇಕದದ್ದೇನೆಂದರೆ, ನಾನು ವಾಸವಾಗಿರುವದಕ್ಕೆ ನೀನು ನನಗೆ ಮನೆಯನ್ನು ಕಟ್ಟುವಿಯೋ?" (2ಸಮುವೇಲ 7:2–5).

ದೇವರು ನಾತಾನನ್ನು ಕಳುಹಿಸಿ ಆತನ ಮೂಲಕ ದಾವಿದನಿಗೆ ಹೇಳಿದ್ದೇನೆಂದರೆ, ದೇವರು ತನಗೆ ಮನೆಯನ್ನು ಕಟ್ಟಲು ದಾವೀದನಿಗೆ ಅನುಮತಿಸುವುದಿಲ್ಲ, ಆದರೆ ದಾವೀದನ ನಂಬಿಗಸ್ಥಿಕೆಗಾಗಿ ದೇವರು ದಾವೀದನಿಗೆ ಒಂದು ಮನೆಯನ್ನು ಕಟ್ಟುವನು(2ಸಮುವೇಲ 7:11). ಈ ಮನೆಯು ಕಲ್ಲು ಅಥವಾ ಇಟ್ಟಿಗೆಗಳಿಂದ ಕಟ್ಟಿದ ಮನೆಯಲ್ಲ, ಆದರೆ ಇದು ಒಂದು ಅರಸನ ಮನೆ, ಇದು ವಿಂಡ್ಸರ್ ಅಥವಾ ಟುಡುರ್ ನ ಮನೆಯ ಹಾಗೆ. ಇದು ದೇವರು ಸಂತೋಷಿಸುವ ದಾವೀದನ ಹೆಬ್ಬಯಕೆಗಳಲ್ಲಿ ಭಾಗಿಯಾಗುವ ಸ್ತ್ರೀಯರು ಮತ್ತು ಪುರುಷರುಗಳಿಂದ ತುಂಬಿದ ಮನೆ. ದೇವರು ಅಬ್ರಹಾಮನೊಂದಿಗೆ ಒಡಂಬಡಿಕೆ ಮಾಡಿಕೊಂಡ ಹಾಗೆಯೇ, ದಾವೀದನೊಟ್ಟಿಗೂ ಮಾಡಿಕೊಂಡನು.

"ನನ್ನ ಪ್ರಜೆಗಳಾದ ಇಸ್ರಾಯೇಲ್ಯರಿಗೆ ಒಂದು ಸ್ಥಳವನ್ನು ಕೊಟ್ಟು ಅದರಲ್ಲಿ ಅವರನ್ನು ನೆಲೆಗೊಳಿಸುವೆನು. ಅವರು ಇನ್ನುಮೇಲೆ ಯಾವ ಭಯವೂ ಇಲ್ಲದೆ ಅಲ್ಲಿ ವಾಸಿಸುವರು. ಇದಲ್ಲದೆ ಯೆಹೋವನಾದ ನಾನು ನಿನಗೋಸ್ಕರ ಒಂದು ಮನೆಯನ್ನು ಕಟ್ಟುವೆನೆಂದು ಮಾತು ಕೊಡುತ್ತೇನೆ. ನಿನ್ನ ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು; ನಾನು ಅವನ ರಾಜ್ಯಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು. ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಮಗನಾಗಿರುವನು; ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾಗಿರುವವು, ನಿನ್ನ ಸಿಂಹಾಸನವು ಶಾಶ್ವತವಾಗಿರುವುದು ಎಂಬದೇ" ಎಂದು ಹೇಳಿದನು(2ಸಮುವೇಲ 7:10–16).

ವಾಗ್ದಾನದ ಸಂತಾನ :–

ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ ಹಾಗೆ, ಅಬ್ರಹಾಮನೂ ಅವನ ಸಂತಾನವದವನಾದ ಯೇಸುಕ್ರಿಸ್ತನೂ ಕಾನಾನ್ ಪ್ರದೇಶವನ್ನು ಎಂದೆಂದಿಗೂ ಬಾಧ್ಯವಾಗಿ ಹೊಂದುವರು. ಆದ್ದರಿಂದ ಈಗ ದೇವರು ದಾವೀದನಿಗೆ ಅವನ ಸಂತಾನದ ಮೂಲಕ ರಾಜ್ಯವನ್ನು ಎಂದೆಂದಿಗೂ ಸ್ಥಿರಪಡಿಸುವದಾಗಿ ವಾಗ್ದಾನಮಾಡಿ ಹೇಳಿದನು: "ನಾನು ಆತನ ತಂದೆ, ಆತನು ನನ್ನ ಮಗನು"(ಆದಿಕಾಂಡಿ 3:15ರಲ್ಲಿ ಸ್ತ್ರೀಯ ಸಂತಾನವನ್ನು ಜ್ಞಾಪಿಸಿಕೊಳ್ಳಿ).

"ನಿನ್ನ ಮುಂದೆ" – ಅಕ್ಷರಶಃವಾಗಿ **"ನಿನ್ನ ಮುಖದ ಮುಂದೆಯೇ"** ಈ ರಾಜ್ಯವು

ಸ್ಥಿರಮಾಡಲ್ಪಡುತ್ತದೆ ಎಂಬುದನ್ನು ಗಮನಿಸಿ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ದಾವೀದನು ಇದನ್ನು ನೋಡಲಿದ್ದಾನೆ, ಈತನೂ ಅಲ್ಲಿರುತ್ತಾನೆ. ದಾವೀದ ಮತ್ತು ಅಬ್ರಹಾಮ ಇವರಿಬ್ಬರೂ ಸಾವಿರಾರು ವರ್ಷಗಳ ಹಿಂದೆಯೇ ಸತ್ತು ಹೋಗಿದ್ದಾರೆ. ಆದರೆ ತಾವು ಹೊಂದಿದ ವಾಗ್ದಾನವು ಅವರಲ್ಲಿ ನೆರವೇರಬೇಕಾದರೆ ಇವುರ ಒಂದೇ ಮಾರ್ಗ–ಪಾಪ ಮತ್ತು ಮರಣದಿಂದ ಬಿಡುಗಡೆಯಾಗಿ ಮರಣದಿಂದ ಪುನರುತ್ಥಾನ ಹೊಂದಬೇಕು. ಅದಕ್ಕಾಗಿಯೇ ಹೊಸ ಒಡಂಬಡಿಕೆಯು ತಿಳಿಸುತ್ತದೆ:"ಇವರೆಲ್ಲರೂ ವಾಗ್ದಾನದ ಫಲವನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದಿಂದ ವಂದಿಸಿ ನಂಬಿಕೆಯುಳ್ಳವಾಗಿ ಮೃತರಾದರು; ತಾವು ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳೂ ಆಗಿದ್ದೇವೆಂದು ಒಪ್ಪಿಕೊಂಡರು" (ಇಬ್ರಿಯ 11:13).

ಮತ್ತೊಮ್ಮೆ, ವಾಗ್ದಾನವು ಯೇಸು ಕ್ರಿಸ್ತನದು–ದೇವದೂತನಾದ ಗಬ್ರಿಯೇಲನು ಮರಿಯಳಲ್ಲಿ ಹುಟ್ಟುವ ಮಗುವಿನ ಜನನವನ್ನು ಸ್ಪಷ್ಟವಾಗಿ ತಿಳಿಸಿದ ಮಾತಿಗಿಂತ ಮಿಗಿಲಾಗಿ ದಾವೀದನಿಗೆ ದೇವರು ಮಾಡಿದ ವಾಗ್ದಾನದ ವಿಷಯವಾಗಿ ಬೇರೆ ಯಾವ ಸ್ಪಷ್ಟ ಸೂಚನೆಯನ್ನೂ ನಾವು ಕಾಣಲಾರೆವು. ದೇವದೂತನಾದ ಗಬ್ರಿಯೇಲನು ಮರಿಯಳಿಗೆ ತಿಳಿಸಿದ ಮಾತುಗಳು ಹೀಗಿವೆ:

"ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೇರುವಿ; ಆತನಿಗೆ ಯೇಸು ಎಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು. ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೇ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲವೂ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ" (ಲೂಕ 1:31–33).

ಕರ್ತನಾದ ಯೇಸು ಯೆರೂಸಲೇಮಿನಲ್ಲಿರುವ ದಾವೀದನ ಸಿಂಹಾಸನದ ಮೇಲೆ ಕೂತುಕೊಂಡು ಅಲ್ಲಿಂದ ಇಡೀ ಭೂಮಿಯನ್ನು ಆಳುವುದಕ್ಕಾಗಿ ಆತನು ಭೂಮಿಗೆ ಹಿಂತಿರುಗದ ಹೊರತು ಈ ವಾಗ್ದಾನವು ನೆರವೇರುವದು ಹೇಗೆ?

ದಾವಿದನ ವಾರಸುದಾರ :–

ದಾವೀದನು ತನ್ನ ಮಗನಾದ ಸೊಲೋಮೋನನಿಂದ ಇಸ್ರಾಯೇಲನ್ನು ಆಳುವ ಮುಖಾಂತರ ಯೆಹೋವನ ಸಿಂಹಾಸನಕ್ಕೆ ವಾರಸುದಾರನಾದನು. ತನ್ನ ಜೀವನಾದ್ಯಂತ ದಾವೀದನು ಇಸ್ರಾಯೇಲ್ ದೇವರಿಗೆ ಒಂದು ಆಲಯವನ್ನು ಕಟ್ಟುವುದಕ್ಕಾಗಿ ಸಿದ್ಧಮಾಡಿಕೊಂಡನು. ಆ ಕೆಲಸವು ಆತನ ಮಗನಾದ ಸೊಲೋಮೋನಿಂದ ಮಾಡಲ್ಪಟ್ಟಿತು. ಸೊಲೋಮೋನನು ಇದನ್ನು ಪೂರ್ತಿಗೊಳಿಸಲು ಏಳು ವರ್ಷಗಳು ಹಿಡಿದವು. ಸಾವಿರಾರು ವರ್ಷಗಳ ಹಿಂದೆ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದಂತೆ ಸೊಲೋಮೋನನ ಆಳ್ವಿಕೆಯಲ್ಲಿ ಇಸ್ರಾಯೇಲ್ ರಾಜ್ಯದ ಗಡಿಗಳು ವಾಗ್ದಾನ ಮಾಡಿದ ಎಲ್ಲಾ ಪ್ರದೇಶಗಳು ಆವರಿಸಿಕೊಂಡವು. "ಐಗುಪ್ತದ ಮಹಾನದಿಯಿಂದ ಯೂಫ್ರಟೀಸ್ ನದಿಯವರೆಗೆ" (ಆದಿಕಾಂಡ 15:18).

ಸೊಲೋಮೋನನ ಜ್ಞಾನ :–

ತನ್ನ ಜ್ಞಾನಕ್ಕಾಗಿ ಸೊಲೊಮೋನನು ಪ್ರಸಿದ್ಧಿಯಾದನು. ಆತನ ಶ್ರೀಮಂತಿಕೆ ಮತ್ತು ಮಹಿಮೆಯು ಒಪ್ಪಿಕೊಳ್ಳಲಾಗದ ಇತಿಹಾಸವಾಗಲ್ಪಟ್ಟಿತು. ಆತನ ರಾಜ್ಯದ ವೈಭವನ್ನು ನೋಡಲು ಸುತ್ತಲಿನ ದೇಶಗಳ ರಾಜರುಗಳು ಬಂದರು, ಅದರೊಳಗೆ ಶೆಬದ ರಾಣಿಯು ಒಬ್ಬಳು(1ಅರಸು 10:1). ಶೆಬದ ರಾಣಿಯು ಸೊಲೊಮೋನನ ರಾಜ್ಯದ ಎಲ್ಲಾ ಮಹಿಮೆಯನ್ನು ನೋಡಿದಾಗ

ಮತ್ತು ಅವನ ಜ್ಞಾನವನ್ನು ಪರಿಕ್ಷಿಸಿದಾಗ ವಿಸ್ಮಿತಳಾದಳು(1ಅರಸು 10:5). ಈ ದಿನದಲ್ಲಿ ಹೇಳುವುದಾದರೆ, "ಅವಳು ಉಸಿರಿಲ್ಲದಂತಾದಳು!"

ಸೊಲೊಮೋನನು ಹಳೆಯ ಒಡಂಬಡಿಕೆಯ ಮೂರು ಪುಸ್ತಕಗಳಾದ– "**ಜ್ಞಾನೋಕ್ತಿ**" "**ಪ್ರಸಂಗಿ**" ಮತ್ತು "**ಪರಮಗೀತ**" ಇವುಗಳ ಗ್ರಂಥಕರ್ತನು. ಜ್ಞಾನೋಕ್ತಿಗಳ ಪುಸ್ತಕವು ಜೀವಿಸಬೇಕಾದ ಜೀವನದ ಮಾರ್ಗಕ್ಕೆ ಕೊಂಡೊಯ್ಯುವ ಅಮೂಲ್ಯವಾದ ಜ್ಞಾನದ ಮಾತುಗಳಿಂದ ತುಂಬಿದೆ. ಕರ್ತನಾದ ಯೇಸು ಹೇಳಿರುವ ಅನೇಕ ಸಾಮ್ಯಗಳು ಜ್ಞಾನೋಕ್ತಿಗಳ ಪುಸ್ತಕದ ಮೇಲೆ ಆಧಾರಿತವಾಗಿವೆ(ಉದಾ: ಮತ್ತಾಯ 7:24–27 ವಾಕ್ಯಗಳನ್ನು ಜ್ಞಾನೋಕ್ತಿ 12:7, ಮತ್ತು 15:25 ವಾಕ್ಯಗಳೊಂದಿಗೆ ಹೋಲಿಸಿ ನೋಡಿ).

"**ಪ್ರಸಂಗಿ**"ಯ ಪುಸ್ತಕವು ಸೊಲೊಮೋನನ ಜೀವನದ ಕೊನೆಯ ದಿನಗಳಲ್ಲಿ ಬರೆಯಲ್ಪಟ್ಟಿತು. ದೇವರಿಂದ ದೂರವಾಗಿ ಜೀವಿಸಿದಾಗ ಮನುಷ್ಯನ ಜೀವನವು ಖಾಲಿಯಾಗಿಯೂ ಶೂನ್ಯವಾಗಿಯೂ ಇರುತ್ತದೆ ಎಂಬುದನ್ನು ಈ ಪುಸ್ತಕ ವಿವರಿಸುತ್ತದೆ. ಈ ಪುಸ್ತಕದ 2ನೇ ಅಧ್ಯಾಯದಲ್ಲಿ ಈ ಪುಸ್ತಕದ ಸಾರಾಂಶ ಸಂದೇಶವನ್ನು ಕೆಲವು ಪದಗಳಲ್ಲಿ ಒಟ್ಟುಗೂಡಿಸಿ ಹೇಳಲಾಗಿದೆ.

"ಆಗ ನನ್ನ ಕೈಯಿಂದ ನಡಿಸಿದ ಎಲ್ಲಾ ಕೆಲಸಗಳಲ್ಲಿಯೂ ನಾನು ಪಟ್ಟ ಪ್ರಯಾಸದಲ್ಲಿಯೂ ದೃಷ್ಟಿಯಿಟ್ಟೆನು; ಆಹಾ, ಗಾಳಿಯನ್ನು ಹಿಂದಟ್ಟಿದ ಹಾಗೆ ಸಮಸ್ತವೂ ವ್ಯರ್ಥವಾಯಿತು; ಲೋಕದಲ್ಲಿ ಯಾವ ಲಾಭವೂ ಕಾಣಲಿಲ್ಲ" (ಪ್ರಸಂಗಿ 2:11).

ಸೊಲೊಮೋನನು ಬರೆದ ಮೂರನೇ ಪುಸ್ತಕ "ಪರಮಗೀತ" ಇದು ಮದಲಿಂಗನಿಗೂ ಆತನ ಮದಲಗಿತ್ತಿಗೂ ನಡುವಿನ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ. ಈ ಪುಸ್ತಕವು ಇಸ್ರಾಯಾಲ್ಯರಿಗೂ ಮತ್ತು ದೇವರಿಗೂ ನಡುವಿನ ಪ್ರೀತಿಯನ್ನು ಮತ್ತು ಒಡಂಬಡಿಕೆಯ ಬಂಧನದ ಪ್ರತಿಬಿಂಬವಾಗಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಈ ಚಿತ್ರವು ಹೊಸ ಒಡಂಬಡಿಕೆಗೂ ಕೂಡ ಒಯ್ಯಲ್ಪಟ್ಟಿದೆ. ಇದನ್ನು ಕರ್ತನಾದ ಯೇಸುಕ್ರಿಸ್ತ(ಮದಲಿಂಗ) ಮತ್ತು ಆತನ ಸಭೆ(ಮದಲಗಿತ್ತಿ)ಯ ನಡುವಿನ ನಿಜ ಸಂಬಂಧವನ್ನು ವಿವರಿಸಲು ಬಲಸಲ್ಪಟ್ಟಿದೆ. ಅಪೋಸ್ತಲ ಪೌಲನು ಎಫೆಸ 5:22–33ರ ವಾಕ್ಯಗಳಲ್ಲಿ ಪತಿ ಮತ್ತು ಪತ್ನಿ ಇವರಿಬ್ಬರ ಜವಾಬ್ದಾರಿಗಳ ವಿಷಯವಾಗಿ ಮಾತನಾಡಿದ್ದಾನೆ ಮತ್ತು ಇದರ ಸಾರಾಂಶವನ್ನು ಎಫೆಸ 5:32 ರಲ್ಲಿ ಹೇಳಿದ್ದಾನೆ–"ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತನಾಡುತ್ತಾ ಇದ್ದೇನೆ; ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು".

ದೇವರ ಮಹಾ ಉದ್ದೇಶವು ಪರಿಪೂರ್ಣವಾಗಲು ಕೊನೆಯದಾಗಿ ಕರ್ತನಾದ ಯೇಸುಕ್ರಿಸ್ತನು ತನ್ನ ಮದಲಗಿತ್ತಿಯೊಂದಿಗೆ ತನ್ನ ಎರಡನೇ ಬರೋಣದಲ್ಲಿ ಒಂದಾಗುತ್ತಾನೆ. ಈ ವಿಷಯವನ್ನು ಪ್ರಕಟನೆಯ ಪುಸ್ತಕದಲ್ಲಿ ಈ ರೀತಿಯಾಗಿ ವಿವರಿಸಲ್ಪಟ್ಟಿದೆ:

"ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂದಿದೆ. ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ. ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಮಹಿಮೆಪಡಿಸೋಣ!..... ಕುರಿಮರಿಯಾದಾತನ ವಿವಾಹದ ಔತಣಕ್ಕೆ ಕರೆಯಲ್ಪಟ್ಟವರು ಧನ್ಯರು ಎಂಬುದಾಗಿ ಬರೆ ಎಂದು ನನಗೆ ಹೇಳಿ, ದೇವರ ಈ ಮಾತುಗಳು ಸತ್ಯವಾಗಿವೆ! ಎಂದನು"(ಪ್ರಕಟನೆ 19:7–9).

• • • • • • • • • • • • •